# ಉಪನಿಷತ್ತುಗಳು

ಸಂಪಾದಕರು

ವೇದರತ್ನ, ವೇದವಾರಿಧಿ, ಸಾಮಗಾನಚತುರ ಆಸ್ಥಾನ ವಿದ್ವಾನ್

**ವೇ॥ಬ್ರ॥ಶ್ರೀ॥ ವಿದ್ವಾನ್ ಕೆ.ಆರ್. ಮಂಜುನಾಥ ಶ್ರೌತೀ**

**ಪ್ರಕಾಶಕರು**

ಅವಧೂತ ದತ್ತ ಪೀಠಮ್

ಶ್ರೀ ಗಣಪತಿ ಸಚ್ಚಿದಾನಂದ ಆಶ್ರಮ, ದತ್ತನಗರ

ಮೈಸೂರು - 570025 ಫೋನ್ - 2486486

**ಶ್ರೀ** ಪ್ರತೀತ ಶ್ರೀ ಪ್ರದಾಯಕರು

**ಗ**ಣಾಧಿಪನಂತೆ ಗೇಯರು

**ಣ**ಕ್ಕಾರ ನಾದ ರೂಪರು

**ಪ**ತಿತ ಪಾವನ ಪಾದರು

**ತಿ**ಲಕ ಜ್ಞಾನ ಸದೃಶರು

**ಸ**ದಾನಂದ ಸಾಗರದಲಿ

**ಚಿ**ತ್ಸ್ವರೂಪ ದರುಶನದಿಂ

**ದಾ**ಸಶ್ರೇಷ್ಠ ಪ್ರತಿಭೆಯಿಂ

**ನಂ**ದದ ಶಕ್ತಿ  ಸ್ವರೂಪದಿಂ

**ದ**ಮಾದಿ ಗುಣ ಶೋಭಿತರು

**ಸ್ವಾ**ನುಭವಂ ಸಕಲರಿಗೂ ಸಾದೃಶಿಸಿ

**ಮೀ**ರಿ ನಿಂತಿಹರು ಧೃವತಾರೆಯಾಗಿ

**ಜಿ**ತೇಂದ್ರಿಯರನ್ನಾಗಿಸಲು ಎಲ್ಲರಂ

**ಅ**ರಿವಿನರಸಿ

ಆಗಮಿಪ ಭಕುತರಿಗೆ

**ಪಾ**ರಮಾರ್ಥದ

ಆಶೀರ್ವಾದದೊಂದಿಗೆ

**ಜಿ**ತೇಂದ್ರಿಯರನ್ನಾಗಿಸಿ

ಸಲಹುತಿರುವಗೆ

ಅಪ್ಪಾಜಿಯೆಂಬ

ಅಭಿದಾನದಿಂ

ಶೋಭಿತರಿಗೆ



**ಪರಮ ಪೂಜ್ಯ**

**ಶ್ರೀ ಗಣಪತಿ ಸಚ್ಚಿದಾನಂದ ಸ್ವಾಮೀಜಿಯವರ ಪಾದ ಕಮಲಗಳಿಗೆ**

**ಮಂಜುನಾಥ ಶ್ರೌತಿಯ ಭಕ್ತಿಪೂರ್ವಕ ಸಮರ್ಪಣೆ**

# ಉಪನಿಷತ್ತುಗಳು


**ಸಂಪಾದಕರು**

**ವೇದರತ್ನ, ವೇದವಾರಿಧಿ, ಸಾಮಗಾನಚತುರ ಆಸ್ಥಾನ ವಿದ್ವಾನ್**

**ವೇ॥ಬ್ರ॥ಶ್ರೀ॥ ವಿದ್ವಾನ್ ಕೆ.ಆರ್. ಮಂಜುನಾಥ ಶ್ರೌತೀ**



**ಪ್ರಕಾಶಕರು**

ಅವಧೂತ ದತ್ತ ಪೀಠಮ್

ಶ್ರೀ ಗಣಪತಿ ಸಚ್ಚಿದಾನಂದ ಆಶ್ರಮ, ದತ್ತನಗರ

ಮೈಸೂರು - 570025 ಫೋನ್ - 2486486

ಪ್ರತಿಗಳು - 500

ಪ್ರಥಮ ಮುದ್ರಣ - 2012

ಮುದ್ರಕರು

**ಮಾ ಪ್ರಿಂಟ್ಸ್, ಬೆಂಗಳೂರು**

**ಪ್ರಾಪ್ತಿ ಸ್ಥಾನ**

**ರಾಗರಾಗಿಣೀ ಟ್ರಸ್ಟ್**

**ಶ್ರೀಗಣಪತಿ ಸಚ್ಚಿದಾನಂದ ಆಶ್ರಮ, ಮೈಸೂರು 570025**

**0821 2486486**

# ವಿಷಯಸೂಚಿಕಾ


| | |
|---|---|
| ಮಂಗಳಾಶಾಸನ | 7 |
| ಮುನ್ನುಡಿ | 8 |
| ಉಪನಿಷತ್ತುಗಳು | 10 |
| 1) ಈಶಾವಾಸ್ಯೋಪನಿಷತ್ | 28 |
| 2) ಕೇನೋಪನಿಷತ್ | 29 |
| 3) ಕಠೋಪನಿಷತ್ | 30 |
| 4) ಪ್ರಶ್ನೋಪನಿಷತ್ | 31 |
| 5) ಮುಂಡಕೋಪನಿಷತ್ | 32 |
| 6) ಮಾಂಡೂಕ್ಯೋಪನಿಷತ್ | 33 |
| 7) ಐತರೇಯ ಉಪನಿಷತ್ | 34 |
| 8) ತೈತ್ತಿರೀಯೋಪನಿಷತ್ | 34 |
| 9) ಛಾಂದೋಗ್ಯ ಉಪನಿಷತ್ | 36 |
| 10) ಬೃಹದಾರಣ್ಯಕ ಉಪನಿಷತ್ | 38 |

ಅವಧೂತ ದತ್ತಪೀಠಾಧಿಪತಿ ಪರಮಪೂಜ್ಯ

## ಶ್ರೀಗಣಪತಿ ಸಚ್ಚಿದಾನಂದ ಸ್ವಾಮೀಜಿಯವರ

# ಮಂಗಳಾಶಾಸನ

ವೇದಾಂತ ವಿಜ್ಞಾನದಿಂದಲೇ ಜನರಿಗೆ ಪರಮಾರ್ಥವು ಲಭಿಸುವುದು. ವೇದದ ಕೊನೆ ಭಾಗವಾದ ಸಿದ್ಧಾಂತವೇ ವೇದಾಂತ ಎಂದು ಪ್ರಸಿದ್ಧಿ. ಈ ಗ್ರಂಥಗಳನ್ನೇ ಉಪನಿಷತ್ ಎನ್ನುತ್ತಾರೆ. ಹುಟ್ಟು ಸಾವಿನ ವಲಯದಲ್ಲಿ ಬೇಸತ್ತ ಮನುಷ್ಯನಿಗೆ ಸಾಂತ್ವನ ಕೊಡುವ ಶಕ್ತಿ ಕೇವಲ ಜ್ಞಾನದಿಂದಲೇ ಲಭಿಸುವುದು. ಇಂತಹ ಜ್ಞಾನದ ಭಂಡಾರವೇ ಉಪನಿಷತ್ತುಗಳು. ಹಾಗಾಗಿ ಉಪನಿಷತ್ತುಗಳ ಅಧ್ಯಯನ ಮತ್ತು ವಿಚಾರಣೆ ಮಾನವನ ಜೀವನವನ್ನು ಸಾರ್ಥಕಗೊಳಿಸುತ್ತದೆ.

ಈ ಮಹಾಗ್ರಂಥಗಳ ಸಂಕ್ಷೇಪ ಪರಿಚಯವನ್ನು ಮಾಡಿ, ಜನರಿಗೆ ರುಚಿ ತೋರಿಸುವ ಸತ್ಕಾರ್ಯಕ್ಕೆ ಪದಾರ್ಪಣೆ ಮಾಡಿದ ದತ್ತಪೀಠ ಆಸ್ಥಾನವಿದ್ವಾಂಸರಾದ ಶ್ರೀಮಂಜುನಾಥ ಶ್ರೌತಿಗಳ ಪ್ರಯತ್ನ ಯಶಸ್ವಿಯಾಗಲಿ. ಮತ್ತು ಸಾಮವೇದದ ಛಾಂದೋಗ್ಯ ಉಪನಿಷತ್ತಿನ ಉಪಾಸನೆಯನ್ನು ಮಾಡಿದ ಲೇಖಕರ ಚಿಂತನಾ ಶಕ್ತಿ ಸಿದ್ಧಿಯಾಗಿ ಓದುಗರ ಮನದಲ್ಲಿ ಪರಿಣಮಿಸಲೆಂದು ಶ್ರೀದತ್ತ ಸದ್ಗುರುವನ್ನು ಪ್ರಾರ್ಥಿಸೋಣ.

# ಮುನ್ನುಡಿ

ಆಹಾರವು ಹೊಟ್ಟೆಯ ಹಸಿವನ್ನು ತಣಿಸುವುದು ನಿಜ. ಇಷ್ಟರಿಂದಲೇ ಮನಸ್ಸು ತೃಪ್ತವಾಗುವುದಿಲ್ಲ. ಹಸಿದ ಹೊಟ್ಟೆಗೆ ಆಹಾರವಿದ್ದರೆ, ತಿಳಿಯುವ ಬಯಕೆಯ ಮನಸ್ಸಿನ ಬುದ್ಧಿಶಕ್ತಿಗೆ ಜ್ಞಾನಾತ್ಮಕ ವಿಚಾರಗಳೇ ಆಹಾರ. ಈ ಆಹಾರವು ಮನುಕುಲದ ಪ್ರಗತಿಗೆ ಅತ್ಯಂತ ಅವಶ್ಯಕ. ಅರಿವಿನ ಹರವನ್ನು ವೇದಗಳು ಚೆನ್ನಾಗಿ ಪ್ರಕಾಶಿಸಿವೆ. ಅವುಗಳ ನಿರಂತರ ಅಧ್ಯಯನ ನಮ್ಮೆಲ್ಲರ ಕರ್ತವ್ಯವೇ ಆಗಿದೆ. ವೇದಾಧ್ಯಯನದ ಹಾದಿಯಲ್ಲಿರಬಹುದಾದ ಕಾಠಿಣ್ಯವನ್ನು ತಗ್ಗಿಸಲು ಹಾಗೆಯೇ ಅಧ್ಯಯನದ ಅರಿವನ್ನು ವಿಸ್ತರಿಸಲು ಉಪನಿಷತ್ತುಗಳು ಆರ್ವಿಭವಿಸಿದವು. ಆ ಉಪನಿಷತ್ತುಗಳಾದರೋ ಜೀವ ಜಾಲದ ನಾನಾ ಮಜಲುಗಳ ವಿವರಣೆ, ಜೀವನಪರಿ, ಜೀವಿತದೊಟ್ಟಿಗೆ ಬೆಸಗಿರುವ ಆನೇಕ ವಿಚಾರಗಳನ್ನು ಕುರಿತು ಬೆಳಕು ಚೆಲ್ಲಿ ವಿಷಯ ಪಿಪಾಸುಗಳ ಮನಸ್ಸನ್ನು ತಣಿಸಿವೆ.

ಅನೇಕ ಉಪನಿಷತ್ತುಗಳು ಇದ್ದಾಗ್ಯೂ ಹತ್ತು ಉಪನಿಷತ್ತುಗಳು ಬಹಳ ಮುಖ್ಯವಾದವುಗಳೆಂದು ಪರಿಗಣಿತವಾಗಿವೆ. ಅವುಗಳ ಪರಿಚಯ ಎಲ್ಲರಿಗೂ ದೊರಕಲಿ, ಉಪನಿಷತ್ತಿನ ದೂರದೃಷ್ಟಿತ್ವವನ್ನು ಎಲ್ಲರೂ ಮನಗಾಣಲಿ ಎಂಬ ಆಶಯದಿಂದ ಈ ಗ್ರಂಥವನ್ನು ರಚಿಸಿದ್ದೇನೆ.

**ಪರಮ ಪೂಜ್ಯ ಶ್ರೀ ಗಣಪತಿ ಸಚ್ಚಿದಾನಂದ ಮಹಾಸ್ವಾಮಿಗಳ ಭೀಮರಥೋತ್ಸವ** ಸಂದರ್ಭದಲ್ಲಿ ರಚಿಸಿ ಪ್ರಕಟಿಸಲು ಆಶೀರ್ವದಿಸಿದ ಪೂಜ್ಯರ ಪಾದರವಿಂದಗಳಲ್ಲಿ ಈ ಪುಷ್ಪವನ್ನು ಸಮರ್ಪಿಸುತ್ತಿದ್ದೇನೆ.

ಈ ಪುಸ್ತಕವನ್ನು **ಪರಮ ಪೂಜ್ಯ ಶ್ರೀ ಗಣಪತಿ ಸಚ್ಚಿದಾನಂದ ಸ್ವಾಮೀಜಿಯವರ ವಿಜಯ ರಥಮಹೋತ್ಸವದ** ಸಂದರ್ಭದಲ್ಲಿ ಅನಾವರಣಗೊಳಿಸಲು ಸೂಕ್ತ ಸಲಹೆಯನ್ನಿತ್ತು ಎಲ್ಲಾ ರೀತಿಯ ಸಹಕಾರವನ್ನಿತ್ತ ವಿಶಿಷ್ಟ ವಿದ್ವಾಂಸರಾದ ಬಹುವಿದ್ಯಾಕೋವಿದರಾದ **ವೇ|| ಬ್ರ|| ವಂಶೀಕೃಷ್ಣ ಘನಪಾಠಿಯವರಿಗೆ** ನಾನು ಅತ್ಯಂತ ಚಿರಋಣಿ. ಮುದ್ರಣ ಪೂರ್ವ ಸಹಕಾರವನ್ನಿತ್ತಿರುವ **ಶ್ರೀ ಹೆಚ್.ಎನ್. ರಾಜೇಶ ಶ್ರೌತೀ** ಹಾಗೂ **ಶ್ರೀ ಎಸ್. ಎಸ್ ಕಿಶೋರ್** ರಿಗೂ ಹಾಗೂ ಆಶ್ರಮದ ನಿರ್ವಾಹಕರಿಗೆ ನನ್ನ ಅನಂತ ಧನ್ಯವಾದಗಳನ್ನು ಸಮರ್ಪಿಸುತ್ತಿದ್ದೇನೆ.

**ನಂದನ ಸಂವತ್ಸರ** — **ಸಜ್ಜನ ವಿಧೇಯ**

**ಜ್ಯೇಷ್ಠ ಶುದ್ಧ ಏಕಾದಶೀ** — **ಕೆ. ಆರ್. ಮಂಜುನಾಥ ಶ್ರೌತೀ**

**ಮೈಸೂರು.**

# ಉಪನಿಷತ್ತುಗಳು

ಪ್ರಪಂಚದಲ್ಲಿ ಪ್ರಾಣವಿರುವುದೆಲ್ಲ ಪ್ರಾಣಿಗಳು. ಆ ಪ್ರಾಣಿಗಳಲ್ಲಿ ಇತರೆಲ್ಲಾ ಪ್ರಾಣಿಗಳಿಗಿಂತ ಭಿನ್ನವಾಗಿರುವುದು ಮನುಷ್ಯಪ್ರಾಣಿ. ಅದಕ್ಕೆ ಕಾರಣ ಅವನ ಬುದ್ಧಿಮತ್ತೆ. ಬುದ್ಧಿ ತಿಳುವಳಿಕೆಯಿಂದ ಬರುವುದು. ಮಾನವ ಯಾವುದೇ ವಿಷಯವಿರಲಿ, ವಸ್ತುವಾಗಲಿ ಅದರ ಬಗ್ಗೆ ಬೇಕು ಬೇಕಾದಷ್ಟು ಅರಿವನ್ನು ಪಡೆಯಲು ಸಮರ್ಥತೆ ಪಡೆದಿದ್ದಾನೆ. ಅರಿತದ್ದನ್ನು ಅಳವಡಿಸಿಕೊಳ್ಳಲು ಶಕ್ತ. ಯಾವ ಯಾವ ರೀತಿಯಲ್ಲಿ ಉಪಯುಕ್ತತೆಯನ್ನು ಪಡೆಯಬೇಕು? ಅದರ ಸಾರ್ಥಕತೆ ಹೇಗೆ? ಅದರ ಸ್ವರೂಪವೆಷ್ಟು? ಹೀಗೆ ವಿವಿಧ ವಿಚಾರಗಳನ್ನು ತಿಳಿಯಲು ಅವನು ಸಮರ್ಥನು.

ಅರಿವು, ತಿಳುವಳಿಕೆಯನ್ನು ಜ್ಞಾನವೆನ್ನುತ್ತಾರೆ. ಆ ತಿಳಿವಿನ ರಾಶಿಯೇ ವೇದ. ವೇದವನ್ನು ಸ್ಪಷ್ಟವಾಗಿ ಹಾಗೂ ಸುಲಭವಾಗಿ ಅರ್ಥೈಸಿಕೊಳ್ಳಲು ಸಾಧ್ಯವಿಲ್ಲ. ಆಗ ಉಪನಿಷತ್ತುಗಳೆಂಬ ವೇದದ ಅಂತ್ಯಭಾಗ ಪ್ರಕಾಶಿತವಾಯ್ತು. ಉಪನಿಷತ್ತು ಪರಮೋತ್ತಮ ಸಾಹಿತ್ಯ ಹಾಗೂ ಅಮರ ಸಾಹಿತ್ಯ .

ಉಪನಿಷತ್ತು ಎಂಬ ಪದವು ಉಪ + ನಿ + ಸತ್ ಗಳಿಂದ ಆಗಿದೆ. ಅಂದರೆ ಸಮೀಪ + ಕೆಳಗೆ + ಆಲಿಸುವುದು. ಯಾರು ಯಾರ ಬಳಿ, ಕೆಳಗೆ? ಹೇಗೆ? ಎಂದರೆ, ಗುರುವಿನ ಹತ್ತಿರ ಶಿಷ್ಯನು ಕುಳಿತು ಆಲಿಸಿ ತಿಳಿದುಕೊಳ್ಳುವುದು.

ವಿಷಯ ಪಿಪಾಸುವು ತನ್ನ ಜ್ಞಾನ ತೃಷೆಯನ್ನು ಗುರುವಿನ ಉಪದೇಶದಿಂದ ಕೇಳಿ ತಿಳಿದು ಅರ್ಥೈಸಿಕೊಳ್ಳುತ್ತಾನೆ. ಇದು ಪರಮ ಸಾಹಿತ್ಯ. ಹೇಗೆಂದರೆ ಗಹನವಾದ ನಿತ್ಯ ಸತ್ಯ ವಿಚಾರಗಳನ್ನು ಮತ್ತು ಭೌತಿಕ ವಸ್ತು, ಭೌತಿಕ ಜ್ಞಾನ ಅವುಗಳ ಸಾರಾಸಾರವಿಚಾರಗಳನ್ನು, ಜೀವನದ ಸತ್ಯಾಸತ್ಯತೆಯನ್ನು ತಿಳಿಸುವುದು ಉಪನಿಷತ್ತು. ಎಷ್ಟೇ ಸಾಮಾಜಿಕ ಬದಲಾವಣೆ ಆದರೂ ಅದನ್ನು ಎದುರಿಸಿ ಅಂದು, ಇಂದು, ನಾಳೆ ಎಂದೆಂದಿಗೂ ಸದೃಢವಾಗಿಯೇ ಇದೆ ಎಂಬುದಕ್ಕೆ ಸೂರ್ಯ ಚಂದ್ರರೇ ಸಾಕ್ಷಿ. ಎಷ್ಟು ಸತ್ಯವೆಂದು ಪ್ರದರ್ಶಿಸಬೇಕೆ? ಅವುಗಳ ಇರುವಿಕೆಯೇ ನಿತ್ಯ ಸತ್ಯವಲ್ಲವೇ. ಹಾಗೆಯೇ ಉಪನಿಷತ್ತುಗಳು ನಿತ್ಯ ಸತ್ಯ ವಿಚಾರಗಳಿಂದ ಕೂಡಿದ ಅಮಿತ ಸಾಹಿತ್ಯವೇ ಆಗಿವೆ.

ಕಲಿಯುವ ಶಿಷ್ಯ ಕುತೂಹಲದಿಂದ ತಾನು ಕಲಿಯಬೇಕೆನ್ನುತ್ತಾನೆ. ಸ್ವಲ್ಪ ಕಲಿತವ ಇನ್ನೂ ಕಲಿಯಬೇಕೆನ್ನುತ್ತಾನೆ. ಕಲಿತವ ಕಲಿಕೆಯ ಸಾರ್ಥಕ್ಯವನ್ನು ಪಡೆಯಬೇಕೆಂದು ಹಂಬಲಿಸುತ್ತಾನೆ. ಈ ಹಂಬಲದಿಂದ ಗುರುವಿನ ಸಮೀಪ ಕುಳಿತು ಅಂತಹ ವಿದ್ಯೆಯಾದ ಪರಮತತ್ವವನ್ನು ಕಲಿಯಲು ಉತ್ಸುಕನಾದಾಗ ಬೋಧಿಸುವ ಗುರು ಮತ್ತು ಶಿಷ್ಯನಿಗೆ ಆತ್ಮೀಯ ಸಂಪರ್ಕವು ಏರ್ಪಡುತ್ತದೆ. ಗಾಢವಾದ ಸಂಬಂಧವು ಬೆಳೆಯುತ್ತಾ ಆತ್ಮೀಯತೆ ಹೆಚ್ಚುತ್ತದೆ. ಜ್ಞಾನಸಂಪರ್ಕದ ಪ್ರಭಾವದಿಂದ ಮೌನವು ಬೆಳೆಯುತ್ತಾ ಹೋಗುತ್ತದೆ. ಜ್ಞಾನವು ಪರಾಕಾಷ್ಠ ಮಟ್ಟಕ್ಕೆ ಹೋದಾಗ ಆತ್ಮಜ್ಞಾನವು ಪ್ರಾಪ್ತವಾಗುತ್ತದೆ. ಹೀಗೆ ಬ್ರಹ್ಮಜ್ಞಾನದಿಂದ ಮೌಲ್ಯವು ಗರಿಷ್ಠ ಮಟ್ಟವನ್ನು ಹೊಂದಿ ಸ್ವಪ್ರಕಾಶದ ತೇಜಸ್ಸಿನಿಂದ ವಿಜೃಂಭಿಸುತ್ತದೆ.

ಆಚಾರ್ಯ ಶಂಕರರು ಅನುಭವಾವಸಾನತ್ವಾತ್ ಭೂತವಸ್ತು ವಿಷಯತ್ವಾತ್ ಚ ಬ್ರಹ್ಮಜ್ಞಾನಸ್ಯ ಎಂದು ಬ್ರಹ್ಮಸೂತ್ರ ಭಾಷ್ಯದಲ್ಲಿ (1,1,2) ನಿರೂಪಿಸಿದ್ದಾರೆ.

ಯಾವುದೇ ವಸ್ತುವಿರಲಿ, ವಿಚಾರವಿರಲಿ ಅವುಗಳ ಭೌತಿಕಜ್ಞಾನದ ಜೊತೆಗೆ ಅನುಭವಪೂರ್ವಕ ಪ್ರಾಪ್ತವಾಗುವ ಜ್ಞಾನವೇ ಅತ್ಯಮೂಲ್ಯವಾದುದು. ವಿಷಯಗಳ ತಿಳಿವು ಅನುಭವವಾದಷ್ಟು ಹೆಚ್ಚು ವೇದ್ಯವು. ಹಾಗಾಗಿ ಬ್ರಹ್ಮಜ್ಞಾನ ವಾಚಾವೇದವಲ್ಲ (ಅಂದರೆ ಮಾತಿಗೆ ಸಿಗುವುದಲ್ಲ). ಅದು ವೇದ್ಯ ವಿದ್ಯೆ (ಅನುಭವಕ್ಕೆ ಮಾತ್ರ ಗೋಚರಿಸುವಂತಹುದ್ದು) ಸತ್ಯ ಮಾರ್ಗದಲ್ಲಿ ನಿರ್ಭಯವಾಗಿ ದಿವ್ಯ ಜ್ಯೋತಿಯನ್ನು ಅರಸುತ್ತಾ ಹೋದಷ್ಟು ಆಂತರ್ಯದಲ್ಲಿ ಅದು ಪ್ರಕಟವಾಗುವುದು ಎಂಬುವುದು ಋಷಿಪುಂಗವರ, ಆಚಾರ್ಯರ ಒಕ್ಕೊರಲಿನ ಅಭಿಪ್ರಾಯ.

ವಸ್ತುವಿನ ಬಗ್ಗೆಯಾಗಲಿ, ಯಾವುದೇವಿಚಾರವಿರಲಿ, ಅದರ ಸತ್ಯತೆ, ಗುಣ, ಪ್ರಯೋಜನ ಇತ್ಯಾದಿ ವಿವರಗಳು ಲಭ್ಯವಿದ್ದಷ್ಟು, ಎಲ್ಲಾ ರೀತಿಯ ಪ್ರಕಾರಗಳನ್ನು ಪರಿಚಯಿಸಿಕೊಂಡಾಗ ಅದನ್ನು ತಿಳಿದಂತಾಗುತ್ತದೆ. ಹೀಗೆ ತಿಳಿಯುವ ಕ್ರಮವೇ ವಿಜ್ಞಾನ. ವಿಜ್ಞಾನವೆಂದರೆ ವಿಶಿಷ್ಟಜ್ಞಾನವನ್ನು ಪಡೆಯುವುದೆಂದರ್ಥ. ಹೀಗೆ ವೈಜ್ಞಾನಿಕವಾಗಿ ತಿಳಿದದ್ದನ್ನು ಅನುಭವಕ್ಕೆ ತಂದುಕೊಂಡು ಆ ವಿಷಯವಸ್ತುವು ತನ್ನಂತೆಯೇ ಎಂಬ ಅವಿನಾಶಿ ಭಾವವನ್ನು, ಸಂಪೂರ್ಣಜ್ಞಾನವನ್ನು ಹೊಂದುವುದೇ ಸುಜ್ಞಾನವೆಂದಿದ್ದಾರೆ.

ಹೀಗೆ ಸುಜ್ಞಾನದ ಸುಪಥದಲ್ಲಿ ಸಾಗುತ್ತಾ ಸುಂದರ ಸೊಬಗಿನ ಜೀವನವನ್ನು ಸಾಧಿಸುವುದು ಜೀವಿಯ ಸಾರ್ಥಕ್ಯಬದುಕಿನ ಸರಿದಾರಿಯೇ ಆಗಿದೆ. ಈ ರಹಸ್ಯಗಳನ್ನು ಉಪನಿಷತ್ತುಗಳು ಸಾರವತ್ತಾಗಿ ಸಂದರ್ಶಿಸಿವೆ. ಸಾಧು ಸತ್ಪುರುಷರು ಸಾಗಿ ಬಂದಿರುವ ಸನ್ಮಾರ್ಗ, ಅದರಲ್ಲಿ ಅವರು ದರ್ಶಿಸಿರುವ ಸೌಂದರ್ಯ ಶಕ್ತಿ, ಮಹತ್ತ್ವ, ಅಂತರ್ದರ್ಶನ ಇತ್ಯಾದಿ ವಿಚಾರಗಳು ಉಪನಿಷತ್ತುಗಳಲ್ಲಿ ಬಹಳವಾಗಿ ಬಿಂಬಿತವಾಗಿವೆ.

ಮಾನವನ ಸರ್ವತೋಮುಖ ಅಭಿವೃದ್ಧಿಯು ಯಾವಾಗ? ಹೇಗೆ? ಈ ಜೀವನದ ಸತ್ಯತೆಯು ಏನು? ಮಾನವನ ಶ್ರೇಷ್ಠತೆಯು ಯಾವುದು ಹೀಗೆ ನಾನಾ ಪ್ರಶ್ನೆಗಳು ಯುಗ ಯುಗಗಳಿಂದ ಭಾರತೀಯ ಋಷಿಗಳನ್ನು, ಸಾಧಕರನ್ನು ಕಾಡಿವೆ. ಮಾನವನ ದೇಹ, ಇಂದ್ರಿಯಗಳು, ಅವನು ಪಡೆದಿರುವ ಅದ್ಭುತ ಶಕ್ತಿ, ಚಿಂತನಸಂಪತ್ತು, ಅವುಗಳ ಕ್ರಿಯೆ, ಅವುಗಳೊಂದಿಗೆ ಸಹಚರನಾಗಿ ಸಾಗಿಸುವ ಜೀವನಾದ್ಯಂತ ಸಾಧನೆ ಇತ್ಯಾದಿ ಅರಿವು ಬಹಳ ಹಿಂದೆಯೇ ಭಾರತೀಯರಿಗೆ ಲಭ್ಯವಾಗಿತ್ತು. ಇದು ವಿದ್ಯಾಭ್ಯಾಸ ಹಾಗು ಧರ್ಮಗಳ ಸಂಗಮದ ಫಲಶ್ರುತಿಯು. ಜೀವನದ ಶ್ರೇಷ್ಠತೆಯನ್ನು ಗಮನಿಸಿ ಅವುಗಳ ಸತ್ಯಾಸತ್ಯತೆಯನ್ನು ಹುಡುಕುತ್ತಾ, ಸಂಶೋಧಿಸಿ ರಸವತ್ತಾದ ಸಾರವನ್ನು ಕಂಡುಕೊಂಡು, ಜೀವನ ಸಾರ್ಥಕ್ಯವನ್ನು ಅಮೃತತತ್ವದೆಡೆಗೆ ಕೊಂಡೊಯ್ಯುವ ಸಾಧಕರ ಪರಿ ಅತಿ ವಿಶಿಷ್ಟವಾದುದು. ಮೂಲಭೂತ ಪ್ರಶ್ನೆಗಳಿಗೆ ಉತ್ತರ ಹುಡುಕುತ್ತಾ, ಸಮಸ್ಯೆಯನ್ನು ಬಿಡಿಸುತ್ತಾ, ಇಂದ್ರಿಯಪರಿಮಿತಿಗಳನ್ನು ದಾಟುವುದು ಹೇಗೆ? ಮನೋದೈಹಿಕ ವ್ಯವಸ್ಥೆಯ ಹತೋಟಿ ಹೇಗೆ? ಎಂಬೀ ಅಮರ

ವಿಷಯಗಳನ್ನು ಋಷಿಪುಂಗವರು ಸಂಶೋಧನೆಯ ಫಲವಾಗಿ ಉಪನಿಷತ್ತುಗಳ ಮೂಲಕ ಜಗತ್ತಿಗೆ ಕರುಣಿಸಿದ್ದಾರೆ.

ವಿಜ್ಞಾನವೇ ಎಲ್ಲವೂ ಅಲ್ಲ. ಅದೇ ಅಂತಿಮ ಗುರಿಯಲ್ಲ. ಅತ್ಯುನ್ನತವಾದ ಸಿದ್ಧಿಯಲ್ಲ. ಅತ್ಯಾಧುನಿಕವಾದ ಮಾನವನ ಯಾಂತ್ರಿಕ, ತಾಂತ್ರಿಕ ಸಿದ್ಧಿಗಳು ಅವನ ಸಮಗ್ರ ಸಾಧನೆಯ ಒಂದು ಇಣುಕಷ್ಟೆ. ಎಷ್ಟೇ ಭೌತಿಕ ಬೆಳವಣಿಗೆಗಳಿದ್ದರೂ, ವ್ಯಾವಹಾರಿಕವಾಗಿ ಎಷ್ಟೇ ವಿಷಯಗಳು ಸರಿಕಾಣಿಸಿದರೂ, ವಿಕಾಸದ ಪ್ರಗತಿಗೆ ಎಷ್ಟೇ ಸಾಕ್ಷಿಯಾಗಿದ್ದರೂ, ಅವನಲ್ಲಿ ಪುರಾತನ ತಾತ್ತ್ವಿಕ ಬದುಕಿನ ನೆಲೆಗಟ್ಟೊಂದಿದೆ. ತನ್ನನ್ನು ತಾನೇ ಮೀರಿ ಬೆಳೆದು ಅಭಿವ್ಯಕ್ತಿಯ ಉನ್ನತ ಮಟ್ಟವನ್ನು ಅವನು ಹೊಂದಬೇಕಾಗಿದೆ. ನೈಜತೆಯನ್ನು ಅರಸುತ್ತಾ, ಅಮರ ದಿವ್ಯತ್ವವನ್ನು ಸಾಕ್ಷಾತ್ಕರಿಸಿ ಕೊಳ್ಳುವುದರಲ್ಲಿ ಪರಮತತ್ವವು ಅಡಗಿದೆಯೆಂಬುದರಲ್ಲಿನ ಸತ್ಯವನ್ನು ಉಪನಿಷತ್ತುಗಳು ಹೊರಹಾಕಿವೆ.

ದುರ್ಬಲತೆ ಎಂಬುದು ಸಾಮಾನ್ಯ. ದೌರ್ಬಲ್ಯವು ಮಾನವರಲ್ಲಿ ಸಹಜವಾಗಿಯೇ ಇದೆ. ನಾನಾವಿಧ ತೊಳಲಾಟ, ಸಂಕಷ್ಟಗಳಲ್ಲಿ ಸಿಲುಕಿ ನರಳುವವರು ಬಹಳ. ಆಸೆ ಇಲ್ಲದವರು ಬಹುಶಃ ಯಾರೂ ಇಲ್ಲ. ಯಾವುದೇ ತರದ ವ್ಯಕ್ತಿಗಳೇ ಇರಲಿ, ಬಾಲಕರಾದಿಯಾಗಿ ಯಾವುದೇ ಹಂತವಿರಲಿ, ಎಲ್ಲರಲ್ಲೂ ಒಂದಿಲ್ಲೊಂದು ಆಸೆ, ನಾನಾತರಹದ ಆಸೆ, ತೀರದ ಬಯಕೆಗಳು ಹೀಗೆ ಆಶಾಗೋಪುರವೇ ಮನೆ ಮಾಡಿರುತ್ತದೆ. ಈ ಬಯಕೆಯನ್ನು ಈಡೇರಿಸಿಕೊಳ್ಳುವ ದಾರಿಯಲ್ಲಿ ಅದರ ಮೋಹಪಾಶಕ್ಕೆ

ಸಿಲುಕುವರೆಷ್ಟೋ? ಅದರ ಬಂಧನದಿಂದ ಹೊರಬರಲಾರದೇ, ತಪ್ಪಿಸಿಕೊಳ್ಳಲಾರದೇ ತವಕಿಸುವವರು ಬಹಳ, ಇದಕ್ಕೆಲ್ಲ ಮಾನಸಿಕ ದೌರ್ಬಲ್ಯವೇ ಕಾರಣ. ಸೀಮಿತ ಬುದ್ಧಿಮತ್ತೆಯಿಂದ ಮನಸ್ಸನ್ನು ಹಿಡಿತದಲ್ಲಿಡಲು ಅಸಾಧ್ಯವಾದ ಪರಿಸ್ಥಿತಿಯೇ ಸಂಕಷ್ಟಗಳಿಗೆ ಮೂಲದಾರಿ. ಹಾಗಾದರೆ ಆಸೆ ಪಡುವುದು ತಪ್ಪೆ? ದೌರ್ಬಲ್ಯತೆಗೆ ನಾವೇ ಹೊಣೆಯೇ? ಭೌತಿಕ ವಸ್ತುಗಳಲ್ಲಿ ಲೋಲುಪತೆ, ಐಹಿಕ, ಸುಖಭೋಗದ ಬಯಕೆ ಇವೆಲ್ಲವೂ ತಪ್ಪೆ? ಹೀಗೆ ನಾನಾ ತರಹದ ಪ್ರಶ್ನೆಗಳು ಜೀವಿಗಳಲ್ಲಿ ಸದಾಕಾಲ ಇರುವಂತಹುದೆ. ಬಯಸುವುದೆಲ್ಲಾ ತಪ್ಪಲ್ಲ. ಅನುಭವಿಸುವುದೆಲ್ಲಾ ಸರಿಯಲ್ಲ. ಎಲ್ಲದಕ್ಕೂ ರೀತಿ ನೀತಿಯಿದೆ. ಮಾನಸಿಕ ತಳಹದಿ ಸರಿಯಾಗಿರಬೇಕಾದದ್ದು ಅತ್ಯಾವಶ್ಯಕ. ಯಾವುದೇ ಪರಿಸ್ಥಿತಿಯನ್ನು ಎದುರಿಸಲು ಶಕ್ತಿಯಿರಬೇಕು. ಅಂತಃ ಶಕ್ತಿ, ಬುದ್ಧಿಯ ಶಕ್ತಿ, ದೈಹಿಕ ಶಕ್ತಿ, ಹೀಗೆ ಶಕ್ತಿಯಿದ್ದರೆ ತಾನೇ ಏನನ್ನಾದರೂ ನಿಭಾಯಿಸಬಹುದು. ಹಾಗಾಗಿ ಶಕ್ತಿಯನ್ನು ಪಡೆಯಿರಿ, ಅದನ್ನು ಚೆನ್ನಾಗಿ ಬೆಳೆಸಿರಿ, ಸರಿಯಾಗಿ ವಿನಿಯೋಗಿಸಿ. ಜೀವನವನ್ನು ಹಸನು ಮಾಡಿಕೊಳ್ಳಿ ಎಂದು ಉಪನಿಷತ್ತುಗಳು ಸಾರಿಸಾರಿ ಹೇಳುತ್ತಿವೆ. ಪಾಪಕೃತ್ಯಗಳ ಪರಿಹಾರಕ್ಕೆ ಪಾಪವೇ ಪರಿಹಾರವಲ್ಲ. ಕೊಳೆಯನ್ನು ತೊಳೆಯಲು ಕೊಳೆಯೇ ಬೇಕಾಗಿಲ್ಲ. ದೌರ್ಬಲ್ಯಕ್ಕೆ ದುರ್ಬಲತೆಯೇ ಮದ್ದಲ್ಲ. ಪ್ರತಿಯೊಂದು ಜೀವಿಯು ಶಕ್ತಿಯ ಕೇಂದ್ರ. ಅದನ್ನು ಸರಿಯಾಗಿ ಉಪಯೋಗಿಸಿ ಜಗತ್ತನ್ನೇ ಶಕ್ತಿಶಾಲಿಯಾಗಿ ಮಾಡಬಹುದು. ಎಲ್ಲಾ ಜನಾಂಗಗಳ, ಮತಗಳ,

ಪಂಥಗಳ, ನಿರ್ಬಲರನ್ನು, ಅಶಕ್ತರನ್ನು, ದಲಿತರನ್ನು, ಆರ್ತರನ್ನು ಮೊದಲ್ಗೊಂಡು ಎಲ್ಲರನ್ನೂ ಉದ್ದೇಶಿಸಿ ಉಪನಿಷತ್ತುಗಳು ಏಳಿ, ಎದ್ದೇಳಿ, ಎದ್ದುನಿಲ್ಲಿ ಪರಿ ಪರಿ ಕಷ್ಟಗಳಿಂದ ಮುಕ್ತರಾಗಿ. ಎಲ್ಲರೂ, ನೀವೆಲ್ಲರೂ ಅಷ್ಟೇ ಏಕೆ, ಬ್ರಹ್ಮಾಂಡ ಮಂಡಲದಲ್ಲಿರುವ ಎಲ್ಲಾ ಜೀವಿಗಳು ಸ್ವತಂತ್ರರು. ಸ್ವಾತಂತ್ರ್ಯವೆಂಬುದು ಪ್ರತಿಜೀವಿಯ ಹೆಬ್ಬಯಕೆ. ಮನದಾಳದಾಸೆ. ಹಾಗಾಗಿ ದೈಹಿಕ ಸ್ವಾತಂತ್ರ್ಯದ ಜೊತೆಗೆ ಬುದ್ಧಿ ಸ್ವಾತಂತ್ರ್ಯ, ಆಧ್ಯಾತ್ಮಿಕ ಸ್ವಾತಂತ್ರ್ಯವನ್ನು ಪಡೆಯಿರಿ ಎಂದು ಉಪನಿಷತ್ತುಗಳು ಕರೆ ಕೊಟ್ಟಿವೆ. "ನಿರ್ಭಯರಾಗಿರಿ" ಯಾವುದರಲ್ಲೂ ಭಯಪಡಬೇಡಿ. ಧೈರ್ಯವನ್ನು ಬೆಳಸಿಕೊಳ್ಳಿ. ಧೈರ್ಯದಿಂದ ಸಶಕ್ತರಾಗಿ ಮುನ್ನುಗ್ಗಿ ಎಲ್ಲವನ್ನು ಸಾಧಿಸಿ ಶಾಂತತೆಯನ್ನು ನಿಮ್ಮದಾಗಿಸಿಕೊಳ್ಳಿ ಮುಂತಾಗಿ ಉಪನಿಷತ್ತುಗಳು ಪರಿಪರಿಯಿಂದ ಸಾರುತ್ತಿವೆ. ಇಡೀ ಜಗತ್ತಿನಲ್ಲಿ ಮಾನವ ಜನಾಂಗಕ್ಕೆ ಇಷ್ಟು ವಿಸ್ತಾರವಾದ ಚಿಂತನೆಯನ್ನು ಎತ್ತರದ ಧ್ವನಿಯಲ್ಲಿ ಉಪನಿಷತ್ತಿನಲ್ಲದೇ ಮತ್ತೆಲ್ಲೂ ಹೇಳಿಲ್ಲ.

ಪಡೆಯುವುದು ನಿಮ್ಮ ಹಕ್ಕು. ಪಡೆದುದ್ದನ್ನು ಅಷ್ಟೇ ಸಾರ್ಥಕವಾಗಿ ವಿನಿಯೋಗಿಸುವುದು ನಿಮ್ಮ ಕರ್ತವ್ಯ. ಪಡೆಯಲು ತೋರಿಸಿದ ಕಾಳಜಿ ಅದರ ವಿನಿಯೋಗ ವಿತರಣೆಯಲ್ಲೂ ಇರಬೇಕಾದ್ದು ಆದ್ಯ ಕರ್ತವ್ಯ. ಶ್ರಮ ಪಟ್ಟು ಪಡೆಯುತ್ತೇವೆ. ಸರಿಯಾಗಿ ಬಳಸಿದರೆ ಅದೆಂತಹ ಅನುಕೂಲ. ನಮ್ಮಿಂದ ಇನ್ನಾರಿಗೂ ಅನನುಕೂಲವಾಗದಂತೆ ಎಚ್ಚರಿಕೆ

ವಹಿಸಿ. ಯಾವುದೇ ವಿಷಯವಿರಲಿ ವಸ್ತುವಿರಲಿ ಬಳಸಿದಾಗ ಅದು ಸಾರ್ಥಕ್ಯ ಬದುಕಿನ ಮೆಟ್ಟಲುಗಳನ್ನು ಮುಟ್ಟಿದಂತಾಗುವುದು.

ನಾವು ಸ್ವತಂತ್ರರು ನಿಜ. ಸ್ವತಂತ್ರರಾಗಿ ಬದುಕಬಯಸುವುದು ಸರಿಯೇ. ಆದರೆ ಸ್ವಾತಂತ್ರ್ಯದ ಸ್ವಚ್ಛಂದ, ಸ್ವಾರ್ಥ ಬಳಕೆ ಮಾತ್ರ ಎಂದಿಗೂ ಸರಿಯಲ್ಲ. ವ್ಯಕ್ತಿ ವ್ಯಕ್ತಿಯಾಗಿ ಎಲ್ಲರ ವಿಕಸನವಾದರೆ ಸಾಮಾಜಿಕ ಕುಟುಂಬಗಳು, ಅಷ್ಟೇ ಏಕೆ, ವಿಶ್ವವೆಲ್ಲವೂ ವಿಕಸಿತವಾದ ಹಾಗೆ. ಸಾರ್ಥಕ್ಯ ಬದುಕು ಎಲ್ಲರದಾಗಬೇಕು. ಅದಕ್ಕಾಗಿ ಸಾಧನಾ ಮಾರ್ಗ ಹಾಗು ಸರ್ವವಿಧ ತಿಳಿವು ಎಲ್ಲರಿಗೂ ದೊರಕಬೇಕು. ಇದೇ ಉಪನಿಷತ್ತಿನ ಮೂಲ ಉದ್ದೇಶ. ಈ ವಿಷಯದಲ್ಲಿ ಎಲ್ಲರನ್ನೂ ಪ್ರೇರೇಪಿಸುವುದು ಅದರ ಕರ್ತವ್ಯವೆಂಬಂತೆ ವಿಚಾರಗಳು ಉಪನಿಷತ್ತುಗಳಲ್ಲಿ ಬಿಂಬಿತವಾಗಿವೆ.

ಮಕ್ಕಳಾದಿಯಾಗಿ ಎಲ್ಲರಿಗೂ ಕತೆ ಕೇಳುವುದರಲ್ಲಿ ಪ್ರೀತಿ ಹೆಚ್ಚು. ಎಂತಹ ಕಠಿಣವಾದ ವಿಷಯಗಳನ್ನು ತನ್ಮೂಲಕ ಸುಲಭವಾಗಿ ಪ್ರಚುರ ಪಡಿಸಬಹುದು. ಹಾಗಾಗಿ ಉಪನಿಷತ್ತುಗಳಲ್ಲಿ ಸಾಧಕರ, ಋಷಿ ಮುನಿಗಳ ವೃತ್ತಾಂತ, ಜೀವನಮಾರ್ಗ, ವಿಚಾರಧಾರೆ, ವಿಷಯಸರಣಿ, ಅನುಭವಾತ್ಮಾಕ ಚಿಂತನೆ, ಹೀಗೆ ಸಮಗ್ರ ವಿಚಾರಗಳು ಪ್ರಸ್ತುತವಾಗಿವೆ. ವಿಷಯವನ್ನು ತಿಳಿಯಲು ತನಗಿಂತ ತಿಳಿದವರಲ್ಲಿ ಪ್ರಶ್ನೆ ಮಾಡುವುದು, ತನ್ನೊಳಗೆ ತಾನು ಪ್ರಶ್ನಿಸುವುದು ಮೊದಲಾಗಿ ಪಠ್ಯ ಕ್ರಮವು ಬಹಳ ಹಿಂದಿನಿಂದಲೂ ಇರುವ ಕ್ರಮ. ಇದು ಸನಾತನ ಧರ್ಮದ ಉದಾತ್ತ ನೀತಿ. ಮತ್ಯಾವ ಪಂಥದಲ್ಲಾಗಲೀ, ಮತದಲ್ಲಾಗಲಿ, ಧರ್ಮದಲ್ಲಾಗಲಿ ಈ ಕ್ರಮವು ಕಾಣಬರುವುದಿಲ್ಲ.

ಸ್ವಧರ್ಮದಲ್ಲಿ ನಿರತವಾಗಿ ತನ್ನ ಧರ್ಮದಲ್ಲಿ ತನಗೆ ತೋರಬಹುದಾದ ಯಾವುದೇ ವಿಧವಾದ ಸಂದೇಹಗಳನ್ನು ಪ್ರಶ್ನಿಸಿ ಅದನ್ನು ಸರಿಯಾಗಿ ತಿಳಿಯುವ ವಿಶಿಷ್ಟ ಕ್ರಮ ಕೇವಲ ಸನಾತನ ಧರ್ಮದಲ್ಲದೇ ವಿಶ್ವದ ಇನ್ಯಾವ ಧರ್ಮದಲ್ಲೂ ಇಲ್ಲ.

ಹಸಿದ ಹೊಟ್ಟೆಗೆ ಆಹಾರ ಸಿಕ್ಕಾಗ ತೃಪ್ತಿ. ಬಯಸಿದ ಭೌತಿಕ ವಸ್ತುಗಳು ಪ್ರಾಪ್ತವಾದಾಗ ತೃಪ್ತಿ, ಮನದಾಳದಲ್ಲಿ ಚಿಂತಿಸಿದುದನ್ನು ಸಾಧಿಸಿದಾಗ ತೃಪ್ತಿ. ಹೀಗೆ ನಾನಾ ಸ್ತರದಲ್ಲಿ ತೃಪ್ತಿಯು ಸಿಗುವುದು. ಆದರೆ ಇದೆಲ್ಲ ಕೇವಲ ಕ್ಷಣಿಕ. ಅಂದರೆ ಆ ಸಮಯದಲ್ಲಷ್ಟೆ ತೃಪ್ತಿ, ಸುಖದ ಅನುಭವ. ಇದೆಲ್ಲಾ ತಾತ್ಕಾಲಿಕ. ಅಮರವಾದ ತೃಪ್ತಿ ಈ ಎಲ್ಲವನ್ನೂ ಮೀರಿದ್ದು. ಅದನ್ನು ಪಡೆಯಿರಿ. ಅದರ ಅನುಭವ ನಿಮ್ಮದಾಗಲಿ ಎಂದು ಉಪನಿಷತ್ತುಗಳು ಹಾರೈಸುತ್ತಿವೆ.

ಆ ಅಮರವಾದ ತೃಪ್ತಿ ಸಿಗುವುದಾದರೂ ಹೇಗೆ? ಇಲ್ಲೇ ಗಹನವಾದ ಆತ್ಮ, ಅದರ ಸ್ವರೂಪ, ತಿಳಿಯುವ ಕ್ರಮ, ಅನುಭವ ಇತ್ಯಾದಿಗಳ ಅವಶ್ಯಕತೆ ಕಂಡುಬರುವುದು. ಕಣ್ಣುಮುಚ್ಚಿದ್ದರೂ ಚಿತ್ರವಿಚಿತ್ರವಾದುದನ್ನು ಒಳಗೆ ಕಂಡಂತಾಗುತ್ತದೆ. ಹಾಗಾದರೆ ನೋಡಿದ್ದು ಕಣ್ಣಲ್ಲವಲ್ಲ. ನೋಡಿದ್ದು ನಿಜವು. ಯಾವುದರಿಂದ ನೋಡಿದ್ದು? ಕಿವಿಯು ಕೇಳಲಿಲ್ಲ. ಆದರೆ ಕೇಳಿದಂತೆ ಭಾಸವಾಗುವುದು. ಹಾಗಾದರೆ ಯಾವುದರಿಂದ ಕೇಳಿತು? ಮುಟ್ಟಲಿಲ್ಲ, ಆದರೆ ಸ್ಪರ್ಶ ಜ್ಞಾನವಾಯ್ತು. ಅದನ್ನು ಮುಟ್ಟಿ ತಿಳಿದ ಹಾಗೆ ಆಯ್ತು. ಹಾಗಾದರೆ ಯಾವ ಸಾಧನದಿಂದ? ಈ ಒಳಗೊಳಗಿನ ಸಾಧನವೇ ಅವ್ಯಕ್ತ ಶಕ್ತಿ. ಆ ಶಕ್ತಿಯನ್ನು ಕುರಿತು ಚಿಂತಿಸಿ.

ಅದರ ಸಾಮರ್ಥ್ಯವನ್ನು ಅರಿಯಿರಿ. ಆ ಅವ್ಯಕ್ತ ಶಕ್ತಿಯನ್ನು ಪ್ರೇರೇಪಿಸುವಂತಹ ಇನ್ನೂ ವಿಶಿಷ್ಟವಾದ ಅಗೋಚರವಾದ ಆ ಮಹತ್ತನ್ನು ತಿಳಿಯಿರಿ. ಆ ಮಹತ್ತನ್ನೇ ಉಪನಿಷತ್ತುಗಳು ಆತ್ಮವೆಂದು ಸಂಬೋಧಿಸಿವೆ. ಅದನ್ನು ತಿಳಿಯಲು ಪ್ರಯತ್ನಿಸಿ. ಅದು ಕೇವಲ ಅನುಭವಕ್ಕೆ ಗೋಚರಿಸುತ್ತದೆ. ನಿಮ್ಮ ಮಾತಿನ ಧಾಟಿಗೆ ಸಿಗುವುದಿಲ್ಲ. ನೀವು ಎಷ್ಟು ಅನುಭವಿಸಿದರೂ ಮತ್ತಷ್ಟು ತಿಳಿಯಬೇಕು ಅನುಭವಿಸಬೇಕೆಂಬ ಕುಂದದ ಹೆಬ್ಬಯಕೆಯು ಜಾಗೃತವಾಗುವುದು. ಇದು ಕೆಲವರ ಅನುಭವಾತ್ಮಕ ವಿಷಯ. ಕೇವಲ ಮಾತಿನಲ್ಲಿ ಪ್ರಕಟವಾಗುವುದಲ್ಲ.

ಕದಿಯಲು ಹೋದ ಕಳ್ಳ ಪದಾರ್ಥವನ್ನೆಲ್ಲ ಕದ್ದು, ಎಲ್ಲವನ್ನೂ ಜೋಡಿಸಿಕೊಂಡು ಇನ್ನೇನು ಕಾಲ್ತೆಗೆಯಬೇಕು ಎನ್ನುವಷ್ಟರಲ್ಲಿ ಅವನಿಗೆ ಜೋರಾಗಿ ಕೆಮ್ಮೋ, ಸೀನೋ ಬಂದರೆ ಆ ಶಬ್ದದಿಂದ ಮಲಗಿದ ಇನ್ನಿತರರನ್ನು ಎಚ್ಚರಿಸಿದಂತಾಗಿ, ತಾನು ಸಿಕ್ಕಿ ಹಾಕಿಕೊಳ್ಳುವ. ಆಗ ಕಳ್ಳತನದ ಪರಿಶ್ರಮ ವ್ಯರ್ಥವಾಯಿತು. ಹಾಗೆಯೇ ಆತ್ಮವನ್ನು ಅರಿತವನು ಆನಂದದ ಅನುಭವವನ್ನು ಹೊಂದಿ ತೃಪ್ತಿಯ ದಾರಿಯಲ್ಲಿ ನಡೆಯುತ್ತಾನೆ. ಅನುಭವಾತ್ಮಕ ಅರಿವಿನ ತೃಪ್ತ ಮಾರ್ಗದಲ್ಲಿ ಅವನ ಸಂಚಾರ. ಮಾತಿಗೆ ವರ್ಣಿಸಲು ಅಸಾಧ್ಯವಾದುದು ಅದು. ಆದುದರಿಂದ ಬ್ರಹ್ಮನನ್ನರಿತವನ ನಡೆ ಗುಮ್ಮನಂತಿರಬೇಕೆಂದು ಸರ್ವಜ್ಞನ ಅಂಬೋಣ.

ಬಹಳ ಖುಷಿಯಾಯಿತು, ತೃಪ್ತಿಯಾಯಿತು, ಬಹಳಷ್ಟು ಪಡೆದಹಾಗಾಯ್ತು. ಹೀಗೆಲ್ಲಾ ಹೇಳುತ್ತೇವೆ.

ಆ ಖುಷಿ ಸಂತೋಷ ತೃಪ್ತಿ ಎಂದರೆ ಏನೆಂದು ವಿವರಿಸಲು ನಮ್ಮಲ್ಲಿ ಶಬ್ದವಿಲ್ಲ. ಬಹಳ ನೋವು ಎನ್ನುತ್ತೇವೆ. ಹೇಗೆ ಎಂದು

ಕೇಳಿದಾಗ ಯಾವ ನೋವು? ಎಂದು ಹೇಳಲು ಶಕ್ತರೇ ಹೊರತು

ಆ ನೋವು ಹೇಗಿದೆ ಎಂದು ವರ್ಣಿಸಲು ನಮಗೆ ಅಸಾಧ್ಯ.

ಹೀಗೆ ದೈನಂದಿನ ಜೀವನದ ನಾನಾ ಹಂತದ ಶಬ್ದಗಳೇ ನಮಗೆಷ್ಟು

ಅರ್ಥವಾಗಿದ್ದರೂ ವಿವರಿಸಲೂ

ಬರುವುದಿಲ್ಲ. ಇನ್ನು ಬ್ರಹ್ಮ, ಆತ್ಮ, ಆನಂದ ಇಂತಹ ಪದಗಳನ್ನು ಹೇಗೆ

ವರ್ಣಿಸಲು ಶಕ್ತರು? ಹಾಗಾಗಿಯೆ

ವಿವರಣೆಗಳು ನಾನಾ ಸ್ತರದಲ್ಲಿ ಪ್ರಕಟವಾಗಿವೆ.

ವಿಷಯಗಳನ್ನು ಕೇವಲ ಬಾಹ್ಯದಲ್ಲಲ್ಲದೇ ಆಂತರ್ಯದಲ್ಲೂ ನೋಡಬಹುದೆಂಬ ಕಟುಸತ್ಯದ ಅರಿವನ್ನು ಪಡೆದ ಕೆಲವು ಮಹಾತ್ಮರು ಲೋಕಕ್ಕೆ ಅನೇಕ ತತ್ವಗಳನ್ನು, ಸನ್ಮಾರ್ಗವನ್ನು ಧಾರೆ ಎರೆದರು. ಲೋಕದಲ್ಲಿ ಇರುವ ಅನೇಕಾನೇಕ ವಿಷಯವಸ್ತುಗಳ ಅರಿವನ್ನು ಅದರ ಬೆಳವಣಿಗೆ ಇತ್ಯಾದಿ ಚಿಂತನೆಯ ನಂತರ ನಾನಾದೃಷ್ಟಿಕೋನದಿಂದ ವಿಮರ್ಶಿಸಿ ಅನೇಕ ವಿಷಯಗಳ ಹಿಂದಿರುವ ಏಕತ್ವ, ಏಕದಲ್ಲಿ ಅನೇಕತ್ವ, ಅನೇಕದರಲ್ಲಿ ಏಕತ್ವ, ಹೀಗೆ ದರ್ಶನಗಳು ಪ್ರಕಟವಾದವು. ಸಮಾಜದಲ್ಲಿ ಸುಖ, ಸ್ಥಿರತೆಯನ್ನು ಸಾಧಿಸಿದ ಮೇಲೆ ಮೂಲಭೂತವಾದ ಪ್ರಶ್ನೆಗಳು ಬೆಳೆಯತೊಡಗಿದವು. ಜೀವಿಯ ವಿಕಾಸಘಟ್ಟ ಯಾವುದು? ಅದರ ಆದಿ ಅಂತ್ಯಗಳ ಸ್ವಾರಸ್ಯವೇನು? ವಿಕಾಸಕ್ಕೆ ಅವಕಾಶಗಳು ಸೀಮಿತವೇ? ಅರಿವಿಗೆ ಕೊನೆಯಿದೆಯೇ?

ಹೀಗೆ ಮೇಲಿಂದ ಮೇಲೆ ನಾನಾ ತರಹದ ಪ್ರಶ್ನೆಗಳು ಚಿಂತನ ಶೀಲರನ್ನು ಕಾಡಿತು. ನಮ್ಮ ಮೇಲೆ ಎಲ್ಲಿಯ ಪ್ರಭಾವ? ಆ ಶಕ್ತಿಯ ಶಕ್ತತೆ ಎಷ್ಟು? ನಾವು ಹೇಗೆ ಅದರ ಪ್ರಭಾವಕ್ಕೆ ಒಳಗಾಗಿದ್ದೇವೆ? ಜೀವನದ ಪರಿ ಪೂರ್ಣತೆ ಎಂದರೇನು? ಜೀವಿಯ ಅತ್ಯುನ್ನತ ಮಟ್ಟ ಯಾವುದು? ಮನಸ್ಸು ತಿಳಿಯಾಗುವ ಬಗೆ ಹೇಗೆ? ಹೀಗೆ ನೂರಾರು ಪ್ರಶ್ನೆಗಳು ಆವಿರ್ಭವಿಸಿದವು. ಹೀಗೆ ವಿಷಯ ವಿಚಾರಗಳ ಮೂಲ ಸತ್ವವನ್ನು ಕುರಿತು ಅನ್ವೇಷಣೆಯು ಆರಂಭವಾಯಿತು. ಅಸಾಧಾರಣಮತಿಯ ಕೆಲವರು ಈ ಕುರಿತು ಆತ್ಮ ಸಂಯಮ, ಧ್ಯಾನದ ಹಾದಿಯಲ್ಲಿ ಅನೇಕ ಪ್ರಶ್ನೆಗಳಿಗೆ ಉತ್ತರವನ್ನು ಕಂಡುಕೊಂಡರು. ಅನೇಕ ಚಿಂತಕರ ಚಿಂತನೆಯು, ನಡುವೆ ಗಂಡಸರು, ಹೆಂಗಸರು, ಮಕ್ಕಳು, ರಾಜರು, ಬುದ್ಧಿ ಜೀವಿಗಳು, ಸಾಮಾನ್ಯ ಜನರು ಹೀಗೆ ಎಲ್ಲರೂ, ಎಲ್ಲವೂ ಕುರಿತಾದ ಸುಂದರ ವ್ಯಾಖ್ಯಾನಗಳು, ಆಖ್ಯಾನ ಉಪಾಖ್ಯಾನಗಳೊಂದಿಗೆ ಸಾರ್ವಕಾಲಿಕ ಸತ್ಯವಾಗಿ ಸೊಗಸಾಗಿ ಉಪನಿಷತ್ತಿನಲ್ಲಿ ಮೂಡಿ ಬಂದವು. ಕೇವಲ ಲೌಕಿಕಸ್ತರದ ಜೀವನವೇ ಪ್ರಧಾನವೇ? ಎಂದರೆ ಖಂಡಿತ ಇಲ್ಲ ಎನ್ನುತ್ತದೆ ಉಪನಿಷತ್ತು.

ಜೀವನದ ಭೋಗಲಾಲಸೆಗಳಿಗೊಳಗಾಗಿ ಮಹಾವೈಭವ ಜೀವನವನ್ನು ನಡೆಸುತ್ತಿದ್ದೇನೆ ಎಂಬ ಅನಿಸಿಕೆಯಿಂದ ನಾನೇ ಅದೃಷ್ಟಶಾಲಿ, ಉತ್ತಮ ಜೀವನ ನಿರ್ವಾಹಕ, ನನ್ನ ಸಮನಾರು? ಎಂಬೀ ಭಾವನೆಯಿಂದ ಬೀಗುವ ಬಹಳಷ್ಟು ಜನರಿದ್ದಾರೆ.

ಕೇವಲ ಆರ್ಥಿಕ ಸಂಪತ್ತೇ ಜೀವನದ ಸೌಭಾಗ್ಯವಲ್ಲ. ಅರ್ಥದಿಂದಲೇ ಎಲ್ಲವನ್ನೂ ಅನುಭವಿಸಲಾಗುವುದಿಲ್ಲ.

ದೈಹಿಕ ಸುಖಭೋಗಗಳಷ್ಟೇ ಜೀವನದ ಸಾರವಲ್ಲ. ಬಹಳಷ್ಟು ಅರ್ಥವಿದ್ದರೂ ದೈಹಿಕಸುಖವಿಲ್ಲದಿದ್ದರೆ ಆ ದ್ರವ್ಯದಿಂದ ಏನು ಪ್ರಯೋಜನ? ಎಂದೆನಿಸುತ್ತದೆ. ಐಷಾರಾಮ ಜೀವನದಲ್ಲಿ ಮುಳುಗಿ ತೇಲುತ್ತಿದ್ದರೂ ಇನ್ನೂ ಏನನ್ನೋ ಪಡೆಯಬೇಕು ಎಂದು ಆಂತರ್ಯದಲ್ಲಿ ಹಂಬಲವಿರುತ್ತದೆ. ಬಾಹ್ಯವಾಗಿ ನಾವೆಲ್ಲರೂ ಸ್ವತಂತ್ರರು. ಸ್ವತಂತ್ರವಾಗಿ ಸರ್ವರೀತಿಯಿಂದಲೂ ಜೀವಿಸಲು ಅರ್ಹರು. ನಿಜ, ಆದರೆ ಆಂತರ್ಯದಲ್ಲಿ ನಾವೆಷ್ಟು ಸ್ವತಂತ್ರರು. ನಮ್ಮ ಮನಸ್ಸು ಯಾವುದೋ ಶಕ್ತಿಯಿಂದ ನಿಗ್ರಹಿಸಲ್ಪಡುತ್ತದೆ. ಯಾವುದೋ ಜ್ಯೋತಿಯು ನಮಗೆ ಬೋಧಿಸುತ್ತದೆ. ನಮ್ಮನ್ನು ಅದರ ಹಿಡಿತದೊಳಗೆ ನಡೆಸುವಂತೆ ಭಾಸವಾಗುತ್ತದೆ. ನಾವು ಕೇವಲ ಬಾಹ್ಯಸ್ವತಂತ್ರರೇ ಹೊರತು ಅಧ್ಯಾತ್ಮ ಸ್ವತಂತ್ರರಲ್ಲ. ಸಮಾಜದ ಪರಿಕಟ್ಟು, ಸಾಮಾಜಿಕ ಚಿಂತನೆಯಿಂದ ಹೊರತಾಗಿ ಜೀವಿಸುವುದು ಸಾಧ್ಯವಿಲ್ಲದಂತಹ ವಿಷಯ ಎಂಬುದನ್ನು ಇತಿಹಾಸದ ಪುಟಗಳಲ್ಲಿ ಕಂಡಿದ್ದೇವೆ. ಸ್ವೇಚ್ಛಾಚಾರವಾಗಿ, ಸ್ವಚ್ಛಂದವಾಗಿ, ನಾಮಾವಶೇಷವಾಗಿ ಗತಿಸಿದ ಅನೇಕರ ವಿಚಾರಗಳನ್ನು ಕಂಡಿದ್ದೇವೆ. ಜೀವನದ ಹಸನು ಮಾರ್ಗಕ್ಕೆ ನಾವು ಚರಿತ್ರೆಯಿಂದ ಕಲಿಯಬೇಕಾದ್ದು ಬಹಳಷ್ಟು ಇದೆ. ಡಾಂಬಿಕ ಜೀವನದ ಮಾರ್ಗ ಅರ್ಥ ಶೂನ್ಯ. ಸಾಮಾಜಿಕ ವಿಚಾರ, ಸಮಾಜದ ಚೌಕಟ್ಟಿಗೆ ಧರ್ಮವೇ ತಳಹದಿ, ಧರ್ಮವು ಎಲ್ಲರನ್ನೂ ಒಗ್ಗೂಡಿಸುತ್ತದೆ.

ಮತಗಳು ವಿಂಗಡಿಸುತ್ತವೆ. ಧರ್ಮವನ್ನು ಸರಿಯಾಗಿ ಅರ್ಥೈಸಿಕೊಳ್ಳದೇ, ಧರ್ಮದ ದಾರಿಯಲ್ಲಿ ಸರಿಯಾಗಿ ನಡೆಯದೇ ಇರುವುದು ನಮ್ಮ ಸಮಾಜದ ನಾನಾ ತೊಂದರೆಗಳಿಗೆ ಕಾರಣ.

ಧರ್ಮ ನಿಂತ ನೀರಲ್ಲ. ಅದು ಹರಿಯುವ ನೀರು. ಧರ್ಮವು ಒಂದು ಚಕ್ರ, ಚಕ್ರವು ನಿಂತಲ್ಲೇ ನಿಂತರೆ ಮಣ್ಣಿನೊಳಗೆ ಹಾಗೆಯೇ ಹೂತುಹೋಗುವುದು. ಆಗ ತೋಳುಬಲದ ಶಕ್ತಿಯಿಂದ ಅದನ್ನು ಮೇಲಕೆತ್ತಿ ಚಕ್ರವು ಮುಂದಕ್ಕೆ ಸಾಗುವಂತೆ ಅದನ್ನು ತಳ್ಳಬೇಕು. ತಳ್ಳುವಾಗ ಸರಿಯಾದ ದಾರಿಯಲ್ಲಿ ಅದನ್ನು ಸಾಗುವಂತೆ ಮಾಡಬೇಕು. ಮುಂದೆ ಯಾವುದೋ ಬಂಡೆ ಅಡ್ಡವಾದರೆ ಚಕ್ರದ ದಿಕ್ಕನ್ನು ಬದಲಿಸಬೇಕು. ಹಳ್ಳಕೊಳ್ಳವಾದರೆ ಮತ್ತೆ ಮೇಲಕ್ಕೆತ್ತಬೇಕಾದ ಪರಿಸ್ಥಿತಿ. ಅಡೆತಡೆಗಳು ಬರುವುದು ಸಾಮಾನ್ಯ. ಆದರೂ ಅಡೆತಡೆಗಳಲ್ಲೂ ಯೋಜಿತವಾದ ರೀತಿಯಲ್ಲಿ ನಡೆಸಿದಾಗ ಚಕ್ರವು ಉರುಳುತ್ತಾ ಸಾಗುವುದು. ಹಾಗೆ ಧರ್ಮವೂ, ಧರ್ಮಮಾರ್ಗವೂ ಸಾಗುತ್ತಿರಬೇಕು.

ನೀರು ನಿಂತಲ್ಲೇ ನಿಂತರೆ ಕ್ರಮೇಣ ಕಶ್ಮಲಭರಿತವಾಗಿ ಕೊಳಕಾಗಿ ಪರಿಣಮಿಸುವುದು. ಕೊಳೆತುದರಿಂದ ವಾಸನೆ ಬರುವುದು. ಅದನ್ನು ಹರಿಯಲು ಬಿಟ್ಟರೆ, ಸರಿಯಾಗಿ ಉಪಯೋಗಿಸುತ್ತಿದ್ದರೆ ಅನುಕೂಲಕರವಾಗಿ ಪರಿಣಮಿಸುವುದು. ಧರ್ಮವು ಹೂತುಹೋದ ಚಕ್ರದ ಹಾಗೆ, ನಿಂತ ನೀರಿನ ಹಾಗೆ ಆದರೆ ಸಾಮಾಜಿಕ ಉಪಟಳಗಳು ಹೆಚ್ಚಾಗುವುದು. ಧರ್ಮದ ಸನ್ಮಾರ್ಗದಲ್ಲಿ ಸಮಾಜವು ತನ್ನನ್ನು ತೊಡಗಿಸಿ ಕೊಂಡಾಗ ಸರ್ವತೋಮುಖ ಅಭಿವೃದ್ಧಿಯನ್ನು ಹೊಂದುವುದು.

ಆಧ್ಯಾತ್ಮ ಚಿಂತನೆಯೇ ಧರ್ಮದ ತಳಹದಿ. ತಾನು ಬದುಕಿ ಇತರರಿಗೂ ಬದುಕಲು ಬಿಟ್ಟು ಎಲ್ಲಾ ಜೀವಿಗಳೊಂದಿಗೆ ಹಸನಾಗಿ ಜೀವನವನ್ನು ನಡೆಸಿ ಜೀವನದ ಸಾರ್ಥಕ್ಯವನ್ನು ಸಾಧಿಸಬೇಕು.

ಗಂಡಸರಾಗಲಿ, ಹೆಂಗಸರಾಗಲಿ, ಮಕ್ಕಳಾಗಲಿ, ಶಿಶುಗಳಾಗಲಿ, ಪಶು ಪಕ್ಷಿ ಪ್ರಾಣಿವರ್ಗವೇ ಆಗಲಿ ಯಾವ ರೀತಿಯ ಜೀವಿಗಳೇ ಆಗಲಿ ಎಲ್ಲರೂ ಉತ್ತಮ ಮಾರ್ಗದ ಜೀವನವನ್ನು ಪಡೆಯಲು ಸ್ವತಂತ್ರರು, ಆ ಮಾರ್ಗದಲ್ಲಿ ನಡೆಯಲು ಶಕ್ತರು, ಸಮರ್ಥರು ಎಂದು ಉಪನಿಷತ್ತುಗಳು ಸಾರಿ ಸಾರಿ ಹೇಳಿವೆ. ಆಧ್ಯಾತ್ಮಿಕ ಸ್ವಾತಂತ್ರ್ಯ ಎಲ್ಲರಿಗೂ ಇದೆ. ಜಾತಿ ಮತಗಳಿಂದ ಅತೀತವಾದ ಕೇವಲ ಜ್ಞಾನಕ್ಕೆ ಯಾವ ಎಲ್ಲೆಯೂ ಇಲ್ಲ. ಜಗತ್ತಿನಲ್ಲಿ ಜನಿಸಿದ ಜೀವಿಗಳೆಲ್ಲರೂ ಆಧ್ಯಾತ್ಮಿಕ ಮಾರ್ಗದಲ್ಲಿ ಧಾರ್ಮಿಕವಾಗಿ ಜೀವಿಸಲು ಅರ್ಹರು. ಯಾರಿಗೂ ಯಾವ ವಿಧದಲ್ಲೂ ವಿಶೇಷವೆಂಬುದೇ ಇಲ್ಲಿ ಇಲ್ಲ.

ಆಧ್ಯಾತ್ಮಿಕ ನೆಲೆ, ಧಾರ್ಮಿಕ ಚಿಂತನೆಯ ಮಾರ್ಗದ ಸರ್ವವಿಧದ ಲಾಭವು ಪ್ರಾಣಿಗಳಿಗಿಂತಲೂ ಮನುಷ್ಯನಿಗೆ ಹೆಚ್ಚು. ಹಾಗಾಗಿ ಬುದ್ಧಿವಂತ ಮನುಜರು ಸನ್ಮಾರ್ಗದಲ್ಲಿ ಸಾಗಿ ಜೀವನವನ್ನು ಉತ್ತಮಗೊಳಿಸಿಕೊಳ್ಳಬೇಕೇ ಹೊರತು, ದುರ್ಬುದ್ಧಿಯಿಂದ, ದುಶ್ಚಟ ದುರ್ವ್ಯಸನಗಳಿಂದ, ಅಸಹಿಷ್ಣುತೆಯ ದಾರಿಯಲ್ಲಿ ನಡೆದರೆ ಪ್ರಾಣಿಗಳಿಗಿಂತ ಕೆಳಮಟ್ಟದಜೀವನ ನಮ್ಮದಾಗುತ್ತದೆ ಎಂಬ ಸತ್ಯವನ್ನು ಚೆನ್ನಾಗಿ ಮನಗಾಣಬೇಕು. ನಮ್ಮ ಸಮಾಜದಲ್ಲಿ ಕೆಲವು ಸಾಮಾಜಿಕ ನಾಯಕರು ಆರ್ಥಿಕ ದುರಾಸೆಯಿಂದ ಅತಿಲೋಲುಪತೆಯಿಂದ ರಾಜಕೀಯವಾಗಿ ಸ್ವಾರ್ಥಕ್ಕಾಗಿ ಸಮಾಜದ

ಸರ್ವೋನ್ನತಿಯ ನಾಟಕವಾಡುತ್ತಾ ಸಾರ್ವಜನಿಕರನ್ನು ಪತನದ ದಾರಿಯಲ್ಲಿ ತಳ್ಳುತ್ತಿದ್ದಾರೆ. ಹೀಗೆ ಸಾಗಿದಾಗ ಯಾವ ಬೆಳವಣಿಗೆಯ ಸಾರ್ಥಕತೆ ಸಿದ್ಧಿಸುವುದು ?

ವ್ಯಕ್ತಿ ವ್ಯಕ್ತಿಗಳ ಅಭಿವೃದ್ಧಿ, ಕುಟುಂಬ, ಸಮಾಜ, ಹೀಗೇ ಒಂದೊಂದು ಅಭಿವೃದ್ಧಿಯಾದಾಗ ಇಡೀ ದೇಶವೇ ಉದ್ಧಾರವಾಗಿ ಮುನ್ನಡೆಯುವುದು.

ಪ್ರಪಂಚದ ಎಷ್ಟೋ ನಾಗರಿಕತೆಗಳು ನಾನಾರೀತಿಯಲ್ಲಿ ಅಳಿದು ಹೋಗಿವೆ. ಹೊಸಪರಿಸರದಲ್ಲಿ, ಬಾಹ್ಯರ ಹಾವಳಿಯಲ್ಲಿ, ನಾನಾ ರೀತಿಯ ತೀಕ್ಷ್ಣ ಬದಲಾವಣೆಗಳ ಹೊಡೆತ ಬಿದ್ದಿದ್ದರೂ ಭಾರತೀಯ ಸಂಸ್ಕೃತಿ ತುಂಬು ಗರ್ಭದಿಂದ ವೈಭವೋಪೇತವಾಗಿ ಸದಾಕಾಲ ಮೆರೆದಿದೆ. ಎಲ್ಲ ರೀತಿಯ ಕಾರ್ಪಣ್ಯವನ್ನೂ ಮೆಟ್ಟಿ ನಿಂತಿದೆ.

ಭಾರತೀಯ ಹಾಗು ಪಾಶ್ಚಾತ್ಯನೋಟದಲ್ಲಿ ಮುಖ್ಯವಾದ ವ್ಯತ್ಯಾಸವು ಹೀಗಿದೆ. ಪ್ರಕೃತಿಯ ಎಲ್ಲಾ ವಸ್ತುಗಳನ್ನು ಚೆನ್ನಾಗಿ ಅರ್ಥ ಮಾಡಿಕೊಂಡು ಅವುಗಳ ಮೇಲೆ ಪ್ರಭುತ್ವವನ್ನು ಸಾಧಿಸಿ ಅವುಗಳಿಂದ ಸಂಪೂರ್ಣ ಅನುಕೂಲವನ್ನು ಪಡೆಯಬೇಕು. ಇದು ಪಾಶ್ಚಾತ್ಯರ ಪ್ರಧಾನ ಅಭಿಪ್ರಾಯ. ಇದು ಸೀಮಿತವಾದ ನೋಟದಿಂದಿದೆ. ವಸ್ತು ವಿಷಯಗಳ ಜ್ಞಾನ ಅತ್ಯಂತ ಅವಶ್ಯಕ. ಹೌದು. ಆದರೆ ಅದರಿಂದಲೇ ಎಲ್ಲವೂ ಸಾಧಿಸಬಹುದೆ?ಇಲ್ಲ. ವಿಜ್ಞಾನದ ಜೊತೆಗೆ ಅನುಭವವನ್ನು ಪಡೆಯಿರಿ, ಆಧ್ಯಾತ್ಮವನ್ನು ಸಾಧಿಸಿ. ಹೀಗೆ ಸಾರ್ವಕಾಲಿಕ ನಿರಂತರ ಸತ್ಯ ವಿಚಾರಗಳನ್ನು ತೋರಿಸಿರುವುದರಿಂದಲೇ ಉಪನಿಷತ್ತುಗಳು ಹಿಂದೆಯೂ ಮುಂದೂ

ಎಂದೆಂದಿಗೂ ಅನುಸರಣೀಯವಾಗಿವೆ. ಬದುಕಿಗೆ ಬೇಕಾಗುವ ಸಾಮಗ್ರಿಯನ್ನು ಉಪನಿಷತ್ತುಗಳು ಆಯಾಯಾ ಹಂತಕ್ಕೆ ಅನುಗುಣವಾಗಿ ಅನೇಕರಲ್ಲಿ ಏಕತೆಯನ್ನು ಕಾಣುವ ಮಾರ್ಗ ಸೂಚಿಸಿವೆ.

ಈಶ್ವರನು ಜಗತ್ತನ್ನೆಲ್ಲಾ ವ್ಯಾಪಿಸಿರುವನು. ಒಳಗೂ ಹೊರಗೂ ಎಲ್ಲೆಲ್ಲೂ ಅವನು ವ್ಯಾಪಕನು, ಅವನಿಲ್ಲದ ಜಾಗವೇ ಇಲ್ಲ, ಅವನ ಆಣತಿಯಿಲ್ಲದೇ ಏನೂ ನಡೆಯದು, ಪ್ರತಿಯೊಂದು ಸ್ಥಳವೂ ಪ್ರತಿ ಪ್ರಾಣಿಯಾದಿಯಾಗಿ ಸಕಲ ಚರಾಚರ ವಸ್ತುಗಳಲ್ಲಿ ಅವನ ಇರುವಿಕೆಯನ್ನು ಕಾಣಬಹುದು, ಅವನಿಲ್ಲದ ಸ್ಥಳವೇ ಇಲ್ಲ ಇತ್ಯಾದಿ ಸರ್ವಾಂತರ್ಯಾಮಿತ್ವವನ್ನು ಶ್ರುತಿಗಳು ಸಾರಿವೆ. ಪ್ರತಿಪಾದಿಸಿವೆ. ಸಾಮಾನ್ಯ ನೋಟದಲ್ಲಿ ಈ ವಿಚಾರವನ್ನು ಒಪ್ಪುವುದಾದರೂ ಹೇಗೆ? ಅವನ ಒಡೆತನ ಅದು ಹೇಗೆ ಸಾಧ್ಯ? ಅವನ ಆಕಾರ, ಅಪಾರ ಸ್ವರೂಪ, ರೀತಿ ರಿವಾಜುಗಳೇನು? ಅವನಿಗೆ ಬೇರೇನೂ ಕೆಲಸವೇ ಇಲ್ಲವೇ? ವಿಶ್ವವನ್ನು ಆಳುವ ಅಧಿಕಾರವನ್ನು ಅವನಿಗೆ ಕೊಟ್ಟವರಾರು? ಅವನಿಗೆ ಅಂತಹ ದಿವ್ಯ ಶಕ್ತಿ ಬಂದುದಾದರೂ ಹೇಗೆ? ಹೀಗೆ ಮಾನವ ಸಹಜ ಪ್ರಶ್ನೆಗಳು ಒಂದನ್ನೊಂದು ಹಿಂಬಾಲಿಸುವಂತೆ ಆವಿರ್ಭವಿಸಿದವು.

ಎಲ್ಲಾ ಶಕ್ತಿಗಿಂತ, ಎಲ್ಲಾ ವಿಚಾರಕ್ಕಿಂತ, ಎಲ್ಲವನ್ನೂ ಎಲ್ಲಾರೀತಿಯಲ್ಲಿ ನಡೆಸುವ ಒಂದು ವಸ್ತುವಿದೆ ಎಂಬುವುದು ಅನುಭವಕ್ಕೆ ಗೋಚರಿಸಿದನಂತರ ಅದನ್ನು ಈಶ ಅಥವ ಒಡೆಯ ಎಂದು ಸಂಬೋಧಿಸಿ ಅದರ ಬಗ್ಗೆ ಪುಂಖಾನು ಪುಂಖವಾಗಿ ಪ್ರಶ್ನೆಗಳು ಉದ್ಭವಿಸಿದವು. ಇದೇ ಜಿಜ್ಞಾಸೆ. ಏನು? ಏಕೆ? ಹೇಗೆ? ಯಾವರೀತಿ? ಅವನ ಇಚ್ಛೆಯಂತೆ ಏಕೆ

ಪ್ರಪಂಚವು ನಡೆಯುತ್ತದೆ. ಹಾಗೇಕೆ ನಡೆಯಬೇಕು. ಅದೆಷ್ಟು ಸತ್ಯ. ನಿಜಕ್ಕೂ ಸತ್ವಯುತವಾದುದೆ? ಇಲ್ಲವಾದರೆ ಎಲ್ಲವೂ ಅಸತ್ಯಪೂರಿತವೆ?

ಹೀಗೆ ಸತ್ಯದ ಕಡೆಗೆ ಜಿಜ್ಞಾಸೆಯು ಸಾಗಿದೆ. ಮುಂದುವರೆದು ದೇಹರಚನೆ ಮತ್ತು ಅಂಗಾಂಗಗಳ ಚಟುವಟಿಕೆಗಳ ಬಗ್ಗೆ ನಾನಾ ವಿಷಯಗಳು ಪ್ರಸ್ತುತವಾದವು. ದೇಹದಲ್ಲಿ ಪಂಚೇಂದ್ರಿಯಗಳು ಅತಿ ಮುಖ್ಯವಾದವು. ಒಂದೊಂದು ಇಂದ್ರಿಯವು ಒಂದೊಂದು ರೀತಿಯ ವಿಶಿಷ್ಟ ಕಾರ್ಯಭರಿತವು. ಯಾವುದನ್ನೂ ಉಪೇಕ್ಷಿಸುವಂತಿಲ್ಲ. ಯಾವುದೂ ಹೆಚ್ಚಲ್ಲ. ಯಾವುದು ಕಡಿಮೆಯಲ್ಲ. ಪ್ರತ್ಯೇಕವಾಗಿ ಗಮನಿಸಿದಾಗ ಒಂದೊಂದು ವಿಶಿಷ್ಟತೆಯು ಕಾಣಬರುವುದು. ಆದರೆ ಒಂದಕ್ಕೊಂದು ಪೂರಕವು. ಇವೆಲ್ಲವೂ ಯಾವುದರಿಂದ ಹೀಗೆ ಕೆಲಸವನ್ನು ಮಾಡುತ್ತಿವೆ?

ಇದಕ್ಕೆ ಪ್ರೇರಕನೊಬ್ಬ ಇರುವ ಹಾಗೆ ತೋರುತ್ತಿದೆಯಲ್ಲ, ಅವನ ಪ್ರೇರಣೆಯಿಲ್ಲದಿದ್ದರೆ ಇಂದ್ರಿಯಗಳೆಲ್ಲವೂ ನಿಷ್ಪ್ರಯೋಜಕವಾಗಿ ಕಂಡುಬರುವುದೆಂಬ ಶುದ್ಧಸತ್ಯ ವಿಚಾರ ವೈಜ್ಞಾನಿಕವಿಮರ್ಶೆಯಿಂದ ಪ್ರಕಟವಾಯ್ತು. ತೊಳೆದಷ್ಟೂ ಹೆಚ್ಚು ಶೋಭಾಯಮಾನವಾಗಿ ಕಾಣುವ ಲೋಹದಂತೆ ವೈಚಾರಿಕ ಪ್ರಪಂಚದಲ್ಲಿ ಸಾಗಿದಷ್ಟು ಆಳಕ್ಕೆ ವಿಷಯಗಳು ಪ್ರಾಪ್ತವಾದವು.

ಸುಮಾರು 200ಕ್ಕೂ ಮಿಕ್ಕಿ ಉಪನಿಷತ್ತುಗಳು ಇಂದಿಗೆ ಲಭ್ಯವಾಗಿದ್ದರೂ ಅಷ್ಟೋತ್ತರಶತಗಳ (108) ಗುಂಪನ್ನು ಪ್ರಾಚೀನವಾದುದೆಂದು, ಇದರಲ್ಲೂ ದಶೋಪನಿಷತ್ತುಗಳೇ (10) ಅತ್ಯಂತ ಪ್ರಾಚೀನತಮವೆಂದು ಸರ್ವಮಾನ್ಯವಾಗಿದೆ.

ಅವುಗಳೆಂದರೆ (1) ಈಶ (2) ಕೇನ (3) ಕಠ (4) ಪ್ರಶ್ನ (5) ಮುಂಡಕ (6) ಮಾಂಡೂಕ್ಯ (7) ಐತರೇಯ (8) ತೈತ್ತಿರೀಯ (9) ಛಾಂದೋಗ್ಯ ಮತ್ತು (10) ಬೃಹದಾರಣ್ಯಕ ಉಪನಿಷತ್ತುಗಳು. ಇವುಗಳ ಕುರಿತಾದ ಪರಿಚಯವನ್ನು ಪಡೆಯೋಣ.

## 1) ಈಶಾವಾಸ್ಯೋಪನಿಷತ್

ಈಶನೆಂದರೆ ಒಡೆಯ. ಈ ವಿಶ್ವದ ಸಕಲ ಚರಾಚರ ವಸ್ತುಗಳು ಯಾವುದೋ ಒಂದು ವಿಶಿಷ್ಟ ಶಕ್ತಿಯ ಪ್ರಭಾವಕ್ಕೊಳಗಾಗಿರುವದನ್ನು ಮನಗಾಣದವರೇ ಇಲ್ಲ. ಆ ದಿವ್ಯ ಶಕ್ತಿಯನ್ನು ಶ್ರುತಿಗಳು ಈಶ್ವರನೆಂದು ಸಂಬೋಧಿಸಿವೆ. ಈಶಾವಾಸ್ಯಮಿದಂ ಸರ್ವಂ ಎಂದು ಆರಂಭವಾಗಿರುವುದರಿಂದ ಈಶಾವಾಸ್ಯ ಉಪನಿಷತ್ ಎಂದಾಗಿದೆ ಇದು ಯಜುರ್ವೇದಕ್ಕೆ ಸೇರಿದ್ದು.

ಕೇವಲ 18 ಮಂತ್ರ ಶ್ಲೋಕಗಳಿಂದ ಕೂಡಿದೆ. ಆಕಾರದಲ್ಲಿ ಬಹಳ ಚಿಕ್ಕದು. ವಿಷಯದಲ್ಲಿ ಅದ್ಭುತವಾದದ್ದು. ಈ ಜಗತ್ತೆಲ್ಲ ಈಶನಿಂದಲೇ ಹುಟ್ಟಿ ಈಶನ ಅಣತಿಯಂತೆ ನಡೆಯುತ್ತಿರುವುದು. ಈಶನ ಕೃಪೆಯಿಲ್ಲದೆ ಒಂದು ಹುಲ್ಲು ಕೂಡಾ ಅಲುಗಾಡುವುದಿಲ್ಲ. ಈಶ ಹಾಗೂ ಜೀವಿಗಳಿಗೂ ಇರುವ ಸಂಬಂಧ ಇತ್ಯಾದಿ ನಿರೂಪಿಸಲ್ಪಟ್ಟಿದೆ. ಜೀವಿಯು ಇತರ ಜೀವಗಳೊಂದಿಗೆ ಹೇಗೆ ಸಂಬಂಧಿತನಾಗಿರಬೇಕು ?

ಯಾವ ಧನವನ್ನು ಅಪೇಕ್ಷಿಸಬೇಕು, ಕರ್ಮಾಚರಣೆಯ ಪ್ರಾಮುಖ್ಯ, ಕರ್ಮದ ಮಹತ್ತ್ವ, ಜೀವಿಯ ಕರ್ತವ್ಯ ನಿರ್ವಹಣೆ, ಜ್ಞಾನ ಅಜ್ಞಾನ, ವಿದ್ಯೆ,

ಅವಿದ್ಯೆ, ಕರ್ಮ, ಆತ್ಮ ಸಾಕ್ಷಾತ್ಕಾರ ಹೀಗೆ ನಾನಾವಿಷಯಗಳು ದ್ವಂದ್ವವಾಗಿರುವಂತೆ ತೋರಿದರೂ ಕಡೆಗೆ ಎಲ್ಲವೂ ದ್ವಂದ್ವಾತೀತವು ಎಂಬ ನಿರೂಪಣೆಯೊಂದಿಗೆ ಈಶನೇ ಎಲ್ಲವೂ, ಈಶನಿಂದಲೇ ಎಲ್ಲದರ ಚಲನವಲನೆಗಳು, ಕಡೆಗೆ ಎಲ್ಲವೂ ಈಶನಲ್ಲೇ ಲೀನವಾಗುವಂತಹುದು. ಹಾಗಾಗಿ ಈಶನೇ ಸಾರ್ವಕಾಲಿಕ ನಿತ್ಯ ಸತ್ಯ ಆನಂದ ಅದ್ವಿತೀಯ ಸ್ವರೂಪನೆಂದು ಈಶನ ಬಗ್ಗೆ ಈಶಾವಾಸ್ಯೋಪನಿಷತ್ತು ಅನೇಕವಾಗಿ ಕೊಂಡಾಡಿದೆ.

## 2) ಕೇನೋಪನಿಷತ್

ಕೇನ ಶಬ್ದದಿಂದ ಇದು ಆರಂಭವಾಗಿದೆ. ಕೇನ - ಯಾರಿಂದ ಈ ಜಗತ್ತು ಸೃಷ್ಟಿಯಾಯಿತು ಎಂಬ ಪ್ರಶ್ನೆಯಿಂದ ಆರಂಭವಾಗಿದೆ. ಪಂಚೇಂದ್ರಿಯಗಳಾದ ಮನಸ್ಸು, ಪ್ರಾಣ, ವಾಕ್, ಚಕ್ಷು ಶ್ರೋತ್ರವು ಹೇಗೆ ನಿಯಂತ್ರಿತವಾಗುತ್ತದೆ ಮೊದಲಾಗಿ ಬ್ರಹ್ಮಸೃಷ್ಟಿಯ ಜೀವಜಾಲ ಮುಂತಾಗಿ ಮೂಲಭೂತ ವಿಷಯಗಳ ಬಗ್ಗೆ ಪ್ರಶ್ನೋತ್ತರ ಸರಣಿಯಿಂದ ಇಂದ್ರಿಯಗಳು ಪ್ರಧಾನವಾಗಿ ಆತ್ಮಸಾಕ್ಷಾತ್ಕಾರಕ್ಕಾಗಿ ಸಹಕಾರಿಯಾದವು, ಆದರೆ ಆತ್ಮ ಸಾಕ್ಷಾತ್ಕಾರವು ಇಂದ್ರಿಯಾತೀತವಾದುದೆಂದು ಎಲ್ಲವೂ ಬ್ರಹ್ಮಮಯವೇ ಎಂದು ಸಾರುತ್ತದೆ.

ಕೇನೋಪನಿಷತ್ತು ಸಾಮವೇದಕ್ಕೆ ಸೇರಿದ್ದು. ನಾಲ್ಕು ಅಧ್ಯಾಯಗಳಿಂದ ಕೂಡಿದೆ. ತಲವಕಾರಋಷಿ ಪ್ರಣೀತವಾದುದೆಂದು ಇದಕ್ಕೆ ತಲವಕಾರೋಪನಿಷತ್ತೆಂದು ಹೆಸರಿದೆ. ಆಕೃತಿಯಲ್ಲಿ ಚಿಕ್ಕದಾದರೂ

ಮೂಲಭೂತ ವಿಷಯಗಳನ್ನು ಕೆಣಕಿ ಬಹು ಅಮೂಲ್ಯವಾದ ಜೀವನಾವಶ್ಯಕ ಉತ್ತರವನ್ನು ಇದು ಪ್ರತಿಬಿಂಬಿಸಿದೆ.

## 3) ಕಠೋಪನಿಷತ್

ಇದು ಎಲ್ಲ ವೇದಕ್ಕೂ ಸಂಬಂಧಿಸಿದಂತಿದೆ ಮೂರು ಅಧ್ಯಾಯಗಳಿಂದ ಕೂಡಿದ್ದು ವಿಶೇಷವಾಗಿ ಕೃಷ್ಣಯಜುರ್ವೇದ ಕಠಶಾಖೆಗೆ ಸೇರಿರುವುದರಿಂದ ಕಠೋಪನಿಷತ್ತಾಗಿದೆ. ಬಹಳಷ್ಟು ವಿಚಾರ ಪೂರ್ಣವಿಷಯಗಳನ್ನು ಹೊಂದಿದೆ. ಮಹರ್ಷಿ ವಾಜಸ್ರವಸರ ಪುತ್ರನಾದ ನಚಿಕೇತನು ಎಲ್ಲವನ್ನೂ ತಿಳಿಯಬೇಕೆಂಬ ಅತಿ ಕುತೂಹಲದಿಂದ ಮೃತ್ಯು ದೇವತೆಯಾದ ಯಮನನ್ನೇ ಪ್ರಶ್ನಿಸಿ ಉತ್ತರವನ್ನು ಪಡೆಯುತ್ತಾನೆ.

ಎಲ್ಲರಲ್ಲೂ ಸಾಮಾನ್ಯವಾಗಿ ಬರುವ ಪ್ರಶ್ನೆಯಾದ ಜೀವಿಯ ಜನ್ಮ, ಅದರ ಅವಸಾನ ಅಂದರೆ ಹುಟ್ಟುಸಾವು ಹಾಗೂ ಮೃತ್ಯುವಿನಿಂದ ಆಚೆ ಆತ್ಮದ ಅವಸ್ಥೆಯೇನು? ಎಂಬ ನಚಿಕೇತನ ಪ್ರಶ್ನೆಗೆ ಸಂವಾದ ರೂಪದಲ್ಲಿ ನಿರೂಪಣೆಯಿದೆ. ನಚಿಕೇತನ ಶ್ರದ್ಧೆ, ಧೈರ್ಯ, ಕುತೂಹಲ, ಆಸಕ್ತಿ, ವಿಚಾರ ಮಂಥನವು ಯಾವಕಾಲಕ್ಕೂ ಭೂಮಂಡಲದಲ್ಲಿ ಅನುಸರಣೀಯವಾಗಿದೆ. ವಿಷಯಗಳ ಬಗ್ಗೆ ಪ್ರಶ್ನಿಸಿ ಉತ್ತರವನ್ನು ಕಂಡುಕೊಳ್ಳುವ ಪರಿಪಾಠಕ್ಕೆ ಪ್ರಶ್ನ ಮಾರ್ಗದ ಕ್ರಮವನ್ನು ತೋರಿಸಿಕೊಟ್ಟ ಮೊದಲಗುರುವೇ ನಚಿಕೇತ.

ಸನಾತನ ಭಾರತೀಯಧರ್ಮದ ಹೊರತು ವಿಶ್ವದ ಇನ್ಯಾವ ಧರ್ಮದಲ್ಲೂ ಪ್ರಶ್ನಿಸುವ ಕ್ರಮವಿಲ್ಲ. ಇತರ ಧರ್ಮವಿಧಿಗಳು ಹೇಳಿದ್ದನ್ನು ಕೇಳಿ ಪರಿಪಾಲಿಸುವುದಕ್ಕಷ್ಟೇ ಸೀಮಿತವು. ಮಾನವನ ಸರ್ವಾಂಗೀಣ

ಅಭ್ಯುದಯಕ್ಕೆ ವಿಚಾರಪರತೆ ಬಹಳ ಸಹಕಾರಿ. ವಿಚಾರವು ಮನಸ್ಸಿನಲ್ಲಿ ಹರಿದಾಡಬೇಕು.

ಅದನ್ನು ಕುರಿತು ಪ್ರಶ್ನಿಸಿ ಉತ್ತರವನ್ನು ಪಡೆದು ಸನ್ಮಾರ್ಗದಲ್ಲಿ ನೀತಿಯುತವಾಗಿ ನಡೆಯಬೇಕು. ವಿದ್ಯೆಯ ನಾನಾ ಪ್ರಕಾರಗಳ ಪರಿಚಯ ಜೀವಕ್ಕೆ ಅತ್ಯಂತ ಅಗತ್ಯವಾದ ನಾನಾ ವಿಚಾರಗಳಲ್ಲಿ ಮಾರ್ಗದರ್ಶನ ಪ್ರತಿಯೊಂದು ಜೀವಿಯ ಅತ್ಮೋನ್ನತಿಗೆ ಅವಶ್ಯಕವು. ಇದೇ ಕಠೋಪನಿಷತ್ತಿನ ಸಾರ. ಜೀವನ ನಿರ್ವಹಣೆ, ಇಂದ್ರಿಯ  ನಿಗ್ರಹ, ಶ್ರದ್ಧೆ, ಧೈರ್ಯ, ಆತ್ಮದ ಅಮರತ್ವ ಮುಂತಾದ ವಿಷಯಗಳ ಬಗ್ಗೆ ಕಠೋಪನಿಷತ್ತು ಮಾರ್ಗದರ್ಶಕವೂ ಹೌದು.

# 4) ಪ್ರಶ್ನೋಪನಿಷತ್

ಈ ಉಪನಿಷತ್ತು ಅಥರ್ವವೇದಕ್ಕೆ ಸೇರಿದ್ದು. ಹೆಸರೇ ಸೂಚಿಸುವಂತೆ ಪ್ರಶ್ನೆಗಳಿಂದ ಕೂಡಿದ ಉಪನಿಷತ್, ಮಹರ್ಷಿ ಪಿಪ್ಪಲಾದರ ಬಳಿ ಆರು ಜನ ವಿಚಾರವಂತರಾದ ಸುಕೇಶಾ, ಸತ್ಯಕಾಮ, ಸೌರ್ಯಾಯಣಿ, ಆಶ್ವಲಾಯನ, ಭಾರ್ಗವ ಹಾಗೂ ಕಬಂಧಿಗಳು ವಿಷಯ ಪಿಪಾಸುಗಳಾಗಿ ಕೇಳಿದ ಪ್ರಶ್ನೆಗೆ ಅವರ ಉತ್ತರದ ಸರಣಿಯು ಪ್ರಶ್ನೋಪನಿಷತ್ತಿನ ಅಡಕವು.

ಈ ಜಗತ್ತಿನ ಹುಟ್ಟು, ಪ್ರಾಣ ಹಾಗೂ ದೇಹಕ್ಕಿರುವ ಸಂಬಂಧ, ಜಾಗ್ರತ ಹಾಗೂ ನಿದ್ರಾವಸ್ಥೆಗಳ ರಹಸ್ಯ, ಸುಖ ದುಃಖದ ವಿಚಾರ, ಪ್ರಣವ ಶಬ್ದದ ಮಹತ್ವ ಹಾಗೂ ಷೋಡಶ ಕಲಾಶಕ್ತಿ ಮುಂತಾದ ಆರು ಪ್ರಶ್ನೆಗಳಿಗೆ ಮಹರ್ಷಿ ಪಿಪ್ಪಲಾದರು ಸೂಕ್ತವಾಗಿ ಉತ್ತರಿಸುತ್ತಾರೆ.

ಮನುಜ ಸಹಜವಾದ ಸಂಶಯ ಕುತೂಹಲ ಹಂಬಲ ಮೊದಲಾಗಿ ನಾನಾ ವೈಚಾರಿಕಪ್ರಕಾರಗಳಿಗೆ ಪ್ರಶ್ನೋಪನಿಷತ್ತು ಸೂಕ್ತವಾಗಿ ಉತ್ತರಿಸುತ್ತದೆ. ಹಾಗಾಗಿ ಧರ್ಮವನ್ನು ಸರಿಯಾಗಿ ಅರಿತು ಅಭ್ಯಸಿಸಲು ಅದನ್ನು ಸರಿಯಾಗಿ ಅರ್ಥ ಮಾಡಿಕೊಳ್ಳಬೇಕು. ಸರಿಯಾಗಿ ಅರ್ಥೈಸಲು ಪ್ರಶ್ನಕ್ರಮವು ಸಾಧು ಕ್ರಮ. ಒಳಗೊಳಗೆ ಪ್ರಶ್ನಿಸಿದಷ್ಟು ನಾನಾ ವಿಧ ಉತ್ತರವನ್ನು ಪಡೆಯಲು ಸಾಧ್ಯ. ಉತ್ತರಗಳನ್ನು ಸಂಶೋಧಿಸಿದಷ್ಟೂ ಸೂಕ್ತ ಜ್ಞಾನ, ದರ್ಶನ ಸಾಧ್ಯವೆಂಬುದು ಪ್ರಶ್ನೋಪನಿಷತ್ತಿನಲ್ಲಿ ನಿರೂಪಿತವಾಗಿದೆ.

## 5) ಮುಂಡಕೋಪನಿಷತ್

ಜೀವನದಲ್ಲಿ ವಿರಕ್ತತೆಯನ್ನು ಪಡೆಯಲಿಚ್ಛಿಸುವ ಸನ್ಯಾಸಿಗಳು, ಇಹಲೋಕದ ಸಂಬಂಧ ತ್ಯಜಿಸಿ ಪರತತ್ವದ ಅನ್ವೇಷಣೆ ಅನುಸಂಧಾನದಲ್ಲಿ ನಿರತರಾದವರು ತಲೆ ಕೂದಲನ್ನು ಕ್ಷೌರ ಕತ್ತಿಯಿಂದ ಮುಂಡನ ಮಾಡಿಸಿಕೊಳ್ಳುವುದು (ಬೋಳಿಸಿಕೊಂಡ), ಹಾಗೆಯೇ ಮನಸ್ಸಿನ ಬಂಧನಗಳನ್ನು ಬಿಡಿಸಿಕೊಳ್ಳಲು ಸಹಾಯಕವಾಗುವ ವಿಚಾರಗಳನ್ನು ಬ್ರಹ್ಮಾನಂದದ ಅನುಭವದ ಬಗ್ಗೆ ಸಾರಿ ಹೇಳಿರುವುದರಿಂದ ಇದು ಮುಂಡಕ ಉಪನಿಷತ್ತೆಂದೆನಿಸಿದೆ.

ಬದುಕೆಂಬ ಸಾಗರವನ್ನು ದಾಟಿ ಭಗವಂತನ ಪರಂಧಾಮವನ್ನು ಸೇರಲು ಜೀವಿಗಳಿಗೆ ಸಹಾಯಕವಾಗುವ ಭದ್ರ ನೌಕೆಯಂತಿದೆ. ಈ ಉಪನಿಷತ್ತಿನಲ್ಲಿ ಸೃಷ್ಟಿ ಹಾಗೂ ಸೃಷ್ಟಿಕರ್ತ, ಪರಾ ಮತ್ತು ಅಪರಾ ವಿದ್ಯೆ, ಬ್ರಹ್ಮ ಮತ್ತು ಬ್ರಹ್ಮ ಸಾಕ್ಷಾತ್ಕಾರ, ತ್ಯಾಗ ಮತ್ತು ತಪಸ್ಸು, ಸಾಧನೆ ಹಾಗೂ

ಸಾಕ್ಷಾತ್ಕಾರ, ಜೀವಾತ್ಮ ಮತ್ತು ಪರಮಾತ್ಮ ಎಂಬ ಆರು ಮಹತ್ತರ ವಿಚಾರಗಳ ಕುರಿತು ಮಾರ್ಗದರ್ಶನವು ಪ್ರಕಟವಾಗಿದೆ.

ಹೀಗೆ ಪ್ರೌಢ ವಿಚಾರಗಳ ಮಹತ್ತರವಾದ ವಿವರಣೆ ಅನುಭವದ ಸೋಪಾನ. ಕರ್ಮಜ್ಞಾನಗಳ ಸ್ವರೂಪ ಅವುಗಳ ಉಪಯುಕ್ತತೆ ಮೊದಲಾಗಿ ಬಹಳ ವಿಷಯಗಳನ್ನು ಪ್ರಕಟಪಡಿಸಿದೆ. ಜೀವಿಯ ಜೀವಿತಾವಧಿಯಲ್ಲಿ ನಾನಾ ಕಷ್ಟಕಾರ್ಪಣ್ಯಗಳು ಬರುವುದು ಸಹಜ ಬಹಳಷ್ಟು ಜನರು ಅದರಲ್ಲಿ ಸಿಕ್ಕಿ ಹಾಕಿಕೊಂಡು ಮೇಲೂ ಬರದೆ, ಒಳಗೂ ಮುಳುಗದೆ, ಪರಿಪರಿಯಾದ ತೊಂದರೆಗಳನ್ನು ಅನುಭವಿಸುತ್ತಿರುವರು.

ಅಂತಹ ಎಲ್ಲರಿಗೂ ಮಾರ್ಗದರ್ಶನವನ್ನು ಮಾಡುತ್ತಾ ನಾನಾ ಪ್ರಕಾರ ಬಂಧನದಿಂದ ಬಂಧಮುಕ್ತವಾಗುವ ರೀತಿ, ಜೀವನದ ಉತ್ತಮತೆಗೆ ಜ್ಞಾನ ಮಾರ್ಗದ ಅವಶ್ಯಕತೆ ಹಾಗೂ ನಾನಾ ವಿಧ ವಿದ್ಯಾ ಪ್ರಕಾರಗಳು, ಸಾಧನಾಮಾರ್ಗದ ಪ್ರಾಮುಖ್ಯ, ವಿಷಯವಿಚಾರಗಳಲ್ಲಿ ಸಾಕ್ಷಾತ್ಕಾರ ಸಾಧಿಸುವ ಕ್ರಮವು ಹೀಗೆ ಬಹಳಷ್ಟು ವಿಚಾರಗಳು ನಿರೂಪಿತವಾಗಿವೆ.

# 6) ಮಾಂಡೂಕ್ಯೋಪನಿಷತ್

ಇದು ಋಗ್ವೇದದ ಮಾಂಡೂಕೇಯ ಶಾಖೆಗೆ ಸೇರಿದ್ದಾಗಿ ಈ ಹೆಸರಿದೆ. ಗಾತ್ರದಲ್ಲಿ ಬಹಳ ಚಿಕ್ಕದು. ಕೇವಲ 12 ಮಂತ್ರಗಳು. ಸುಮ್ಮನೆ ನೋಡಿದರೆ ಅಕ್ಷರ ಪುಂಜಗಳ ಸಂಯೋಜನೆಯಷ್ಟೇ ಕಾಣಬರುವುದು. ಒಳಹೊಕ್ಕಾಗ ಮಾನಸಿಕ ತಯಾರಿ, ವಿವೇಕದ ಶಕ್ತಿ, ಧ್ಯಾನ ಚಿಂತನೆಗಳ, ಬಲದ ಬಗ್ಗೆ ಪ್ರಕಾಶವನ್ನು ಬೀರುತ್ತದೆ.

ಮನಸ್ಸಿನ ಜಾಗ್ರತ್ ಸುಷುಪ್ತಿ ಸ್ವಪ್ನ ಹಾಗೂ ತುರೀಯವೆಂಬ ನಾಲ್ಕು ಅವಸ್ಥೆಗಳು, ಬ್ರಹ್ಮ, ಹಿರಣ್ಯಗರ್ಭ, ತೈಜಸವೆಂಬ ಸೃಷ್ಟಿಶಕ್ತಿ ಗಹನವಾದ ಆತ್ಮವಿಚಾರ ಹಾಗೂ ಸಾರಭೂತವಾದ ಓಂಕಾರದ ಹಿರಿಮೆ  ಗರಿಮೆ ಕುರಿತು ಇಲ್ಲಿ ಅನೇಕ ವಿಚಾರಗಳು ಬಿಂಬಿತವಾಗಿವೆ. ವೇದಮಂತ್ರಗಳ ಸಾರ ವ್ಯಾಹೃತಿ. ಆ ವ್ಯಾಹೃತಿಯ ಸಾರ ಪ್ರಣವ. ಪ್ರಣವವೇ ಪ್ರಪಂಚ. ಎಲ್ಲವನ್ನೂ ಆವರಿಸಿ ನಡೆಸುತ್ತಿರುವ ಎಲ್ಲವೂ ಅದರ ಅಧೀನವೆಂದು ಪ್ರಣವದ ಮಹತ್ತ್ವವನ್ನು ಪ್ರತಿಪಾದಿಸಿದೆ.

## 7) ಐತರೇಯ ಉಪನಿಷತ್

ಇದು ಐತರೇಯ ಋಗ್ವೇದದ ಆರಣ್ಯಕದ ಭಾಗವಾಗಿರುವುದರಿಂದ ಈ ಹೆಸರಿದೆ. ಕೇವಲ ಮೂರು ಅಧ್ಯಾಯದಿಂದ ಕೂಡಿದೆ. ಸೃಷ್ಟಿ, ಸೃಷ್ಟಿರಹಸ್ಯ, ಮಾನವ, ಬ್ರಹ್ಮ ಸ್ವರೂಪ ಹಾಗೂ ಆತ್ಮದ ವಿಚಾರವಾಗಿ ಹಲಕೆಲವು ಪ್ರಶ್ನೆಗಳು ಇಲ್ಲಿ ವಿವರಿತವಾಗಿವೆ. ಜೀವಿ, ಜೀವಜಾಲದ ಬಗ್ಗೆ ಸರಿಯಾದ ಜ್ಞಾನ ಬಂದಾಗಲೇ ಜೀವನ ಹಸನಾಗುವುದು. ಈ ಪರಿ ಎಷ್ಟು ತಿಳಿದರೂ ಕಮ್ಮಿಯೇ. ಆದರೂ ತಿಳಿಯುವ ಹಂಬಲದಿಂದ ಜ್ಞಾನಾರ್ಜನೆ ಮಾಡಬೇಕು. ತನ್ಮೂಲಕ ಜೀವನದ ಸಾರ್ಥಕ್ಯವನ್ನು ಪಡೆಯಬೇಕು ಮೊದಲಾಗಿ ನಿರೂಪಿತವಾಗಿದೆ.

## 8) ತೈತ್ತಿರೀಯೋಪನಿಷತ್

ಇದು ಯಜುರ್ವೇದದ ತೈತ್ತಿರೀಯ ಆರಣ್ಯಕಕ್ಕೆ ಸೇರಿದ್ದು. ಮೂರು ಅಧ್ಯಾಯಗಳಿವೆ. ಬಹಳ ಮಹತ್ವ ಪೂರ್ಣವಾದ ಉಪನಿಷತ್ತಿದು.

ವಿದ್ಯಾಭ್ಯಾಸ ಮುಗಿಸಿ ಗುರುಕುಲದಿಂದ ಮನೆಗೆ ಮರಳುವ ವಿದ್ಯಾರ್ಥಿಗೆ ಅಥವಾ ಸ್ನಾತಕನಿಗೆ ಮುಂದೆ ಅವನ ಜೀವನಕ್ಕೆ ಉಪಯುಕ್ತವಾಗುವ ಮಾರ್ಗದರ್ಶನವು ಇಲ್ಲಿ ಅಡಕವಾಗಿದೆ. ಇದು ಸಾರ್ವಕಾಲಿಕ ವಿಷಯ. ಇಂದೂ ಕೂಡ ಜೀವನಾಧಾರಕ್ಕೆ ವಿದ್ಯೆಯನ್ನು (ಪದವಿಇತ್ಯಾದಿ) ಮುಗಿಸಿದ ತರುವಾಯ ವಿದ್ಯಾರ್ಥಿಗಳು ಜೀವನವನ್ನು ಹೇಗೆ ರೂಪಿಸಿಕೊಳ್ಳಬೇಕು ಎನ್ನುವುದರ ಬಗ್ಗೆ ಇಲ್ಲಿ ಉಪದೇಶವಿದೆ.

ಭಾರತೀಯ ಧರ್ಮವು ಧರ್ಮ, ಅರ್ಥ, ಕಾಮ, ಮೋಕ್ಷಗಳೆಂಬ ನಾಲ್ಕು ಪುರುಷಾರ್ಥಗಳನ್ನು ಸಾಧಿಸುವ ಸಾರಭೂತ ತತ್ವವನ್ನು ವಿವೇಚಿಸಿದೆ. ಜೀವನದ ದಿನನಿತ್ಯದ ಆಗು ಹೋಗುಗಳು ಅವುಗಳೊಂದಿಗೆ ನಮ್ಮನ್ನು ಹೊಂದಿಸಿಕೊಳ್ಳುವುದು, ಕರ್ತವ್ಯನಿಷ್ಠೆ, ಗುರುಹಿರಿಯರು ಮಾತಾಪಿತೃಗಳಲ್ಲಿ ಗೌರವಯುತವಾಗಿ ನಡೆದುಕೊಳ್ಳುವುದು, ವಿಷಯ ಜಿಜ್ಞಾಸೆ, ವಿಚಾರಮಂಥನ, ಸತ್ಯನಿಷ್ಠೆ, ಪ್ರಾಮಾಣಿಕನಡತೆ, ನಡವಳಿಕೆ ಮೊದಲಾದ ಅನೇಕಾನೇಕ ಸಲಹಾಯುಕ್ತ ವಿಚಾರಗಳ ಸ್ಪಷ್ಟಮಾರ್ಗದರ್ಶನ ಇಲ್ಲಿ ತುಂಬಿದೆ. ಹೀಗೆ ಜೀವನಕ್ಕೆ ವಿಶಿಷ್ಟ ಬೆಳಕನ್ನು ಕೊಡುವ ಸಾಮರ್ಥ್ಯ ಈ ಉಪನಿಷತ್ತಿಗಿದೆ.

ಬ್ರಹ್ಮ ಎಂದರೇನು ? ಎಂಬ ವಿಷಯ ನಿಶ್ಚಲವಾಗಿ ತಿಳಿಸುತ್ತಾ ಬಹಳ ಸ್ಪಷ್ಟವಾದ ದೃಢನಿಲುವನ್ನು ಉದ್ಘೋಷಿಸಿರುವುದೇ ಇದರ ಮಹತ್ವ. ಮಾನವನು ಜೀವ ಜಗತ್ತು ಆತ್ಮ ಇತ್ಯಾದಿ ವಿಷಯಗಳಲ್ಲಿ ಇನ್ನೂ ಸಂಶೋಧನೆಯನ್ನು ನಡೆಸುತ್ತಲೇ ಇದ್ದಾನೆ.

ಆದರೆ ಈ ಉಪನಿಷತ್ತಿನಲ್ಲಿ ಬ್ರಹ್ಮ ಎಂದರೆ ಆನಂದ ಆನಂದವೇ ಬ್ರಹ್ಮ ಎಂಬ ಸಿದ್ಧಾಂತವು ಬಹಳ ವಿವೇಚನೆಯಿಂದ ಅನುಪಮವಾಗಿ ನಿರೂಪಿತವಾಗಿದೆ. ಇದು ತ್ರಿಕಾಲಸತ್ಯ. ಜಗತ್ತು, ಜೀವ, ಪಂಚೇಂದ್ರಿಯಕೋಶಗಳು ಅವುಗಳೊಂದಿಗೆ ನಿಕಟ ಸಂಬಂಧ, ಅನ್ಯೋನ್ಯತೆ ಹಾಗೂ ಅನುಭವಗಳ ಸಾರಭೂತ ವಿಚಾರವನ್ನು ಅದ್ಭುತವಾಗಿ ತೈತ್ತರೀಯ ಉಪನಿಷತ್ತು ಪ್ರಕಟಿಸಿದೆ.

ಬ್ರಹ್ಮದ ಇರುವಿಕೆ ಹಂತ ಹಂತಗಳಲ್ಲಿ ಪ್ರಕಟವಾಗುವ ರೀತಿ, ಬ್ರಹ್ಮ ವಿದ್ಯೆಯ ಅನುಭವದ ನಾನಾ ಪ್ರಕಾರಗಳು, ಕೇವಲ ಅನುಭವಾತ್ಮಕವೇ ಬ್ರಹ್ಮ, ಅದು ಸ್ವಯಂ ಪ್ರಕಾಶ, ಮಾತಿನ ಜಿಜ್ಞಾಸೆಗೆ ದೊರಕದೇ ಮನಸ್ಸಿನ ಜಿಜ್ಞಾಸೆಗೆ ಹಂತ ಹಂತವಾಗಿ ಮೆಟ್ಟಲೇರುವಂತೆ ಆತ್ಮವಿಕಸನದೆಡೆಗೆ ಕೊಂಡೊಯ್ಯುವ ಮಾರ್ಗವನ್ನು ತೈತ್ತಿರೀಯವು ಪ್ರಕಾಶಪಡಿಸಿದೆ.

## 9) ಛಾಂದೋಗ್ಯ ಉಪನಿಷತ್

ಇದು ಸಾಮವೇದಕ್ಕೆ ಸಂಬಂಧಿಸಿದ್ದು ಸಾಮಗಾನ ಮಾಡುವವರನ್ನು ಛಂದೋಗರೆನ್ನುತ್ತಾರೆ. ಆ ವಿಷಯಕ್ಕೆ ಸಂಬಂಧಿಸಿದುದರಿಂದ ಛಾಂದೋಗ್ಯ ಉಪನಿಷತ್ತಾಗಿದೆ. ಇದು ಅನೇಕ ಖಂಡಗಳಿಂದ ಯುಕ್ತವಾದ ಎಂಟು ಅಧ್ಯಾಯಗಳಿಂದ ಕೂಡಿದೆ. ಗಾತ್ರದಲ್ಲಿ ಬಹಳ ವಿಸ್ತೃತವಾದುದು. ವಿಷಯಸಂಪತ್ತು, ಅರ್ಥಗಾಂಭೀರ್ಯ, ನಿರೂಪಣಾಶೈಲಿ, ನೈಜಾಂಶ ಪ್ರತಿಪಾದನೆ, ಸೂಕ್ಷ್ಮವಿಷಯಗಳ ವಿವರಣೆ ಇತ್ಯಾದಿಯಲ್ಲಿ ಇದು ಮಹತ್ತರವಾದ ಉಪನಿಷತ್ತಾಗಿದೆ.

ವಿಷಯ ಪ್ರತಿಪಾದನೆಗೆ ಸಾಕಷ್ಟು ಕಥೆಗಳು, ರೂಪಕಗಳು ಇಲ್ಲಿವೆ. ವೇದಾಂತದ ತತ್ವಮಸಿ ಮೊದಲಾದ ಮಹಾವಾಕ್ಯಗಳು ಇಲ್ಲಿಂದಲೇ ಪ್ರಕಟವಾಗಿವೆ. ನಾದಾತ್ಮಕವಾದ ಬ್ರಹ್ಮ, ನಾದ, ಪ್ರಪಂಚ, ನಾದಲೀನ ಹೊಂದುವ ಜೀವಿಗಳು ಹೀಗೆ ವಿಶ್ವವೆಲ್ಲವೂ ನಾದಾತ್ಮಕ ಹಾಗೂ ನಾದಾಧೀನ, ಆ ನಾದದ ಸುಮಧುರ ಸೌಷ್ಠವ ಬಳಕೆ ವೇದದಲ್ಲೇ ಅಗ್ರಸ್ಥಾನವನ್ನು, ಖ್ಯಾತಿಯನ್ನು ಪಡೆದಿರುವ ಸಾಮವೇದದಲ್ಲಿ ಪ್ರಕಾಶಿತವಾಗಿದೆ. ಹಾಗಾಗಿಯೇ ಸಾಮವೇದವನ್ನು ಗಾನವಿದ್ಯೆಯೆನ್ನುತ್ತಾರೆ.

ಆ ಗಾನದ ರಸ ಗೀತೆಯ ಉತ್ಕೃಷ್ಟ ಭಾವವಾದ ಉದ್ಗೀಥ. ಅದರ ವಿಶೇಷತೆ, ಉಪಾಸನಾಕ್ರಮ ಮೊದಲಾಗಿ ಸಮಗ್ರ ವಿವರಣೆ, ಸತ್ಯಕಾಮ ಜಾಬಾಲನ ವೃತ್ತಾಂತ, ಉಪಕೋಸಲವಿದ್ಯೆ, ಪಂಚಾಗ್ನಿವಿದ್ಯೆ, ಆದಿತ್ಯೋಪಾಸನೆ, ಷೋಡಶಕಲಾವಿದ್ಯೆ, ನಾರದ ಸನತ್ಕುಮಾರ ಸಂವಾದ, ವೈಶ್ವಾನರವಿದ್ಯೆ ಮೊದಲಾಗಿ ಮಹತ್ತರವಾದ ವಿಷಯಗಳಲ್ಲದೇ ಆತ್ಮ ವಿದ್ಯಾ ಉಪಾಸನ ಹಾಗೂ ಅಧ್ಯಾತ್ಮದ ಅನೇಕ ವಿಷಯಗಳನ್ನು ಕುರಿತು ಸುದೀರ್ಘವಾಗಿ ಪ್ರಸ್ತಾಪಿಸಲಾಗಿದೆ.

ಈ ಜಗತ್ತೆಲ್ಲ ಬ್ರಹ್ಮಮಯ. ಇಡೀ ಜಗತ್ತೇ ಬ್ರಹ್ಮದ ಅಧೀನ. ಬ್ರಹ್ಮವೆಂದರೆ ವಿಶ್ವವನ್ನು ನಿಯಂತ್ರಿಸುತ್ತಿರುವ ಅಗೋಚರವಾದ ದಿವ್ಯಶಕ್ತಿ. ಅದರಿಂದಲೇ ಎಲ್ಲವೂ ಉಂಟಾಗಿ ಅದರ ಬೆಳಕಿನಿಂದಲೇ ಬೆಳೆಸಿ ಕಡೆಗೆ ಅದನ್ನು ಕುರಿತೇ ಹಿಂತಿರುಗುವ ಜೀವ ಜಾಲದ ಸ್ವರೂಪವನ್ನು ಪ್ರಕಟಿಸುತ್ತಾ ಮನಸ್ಸಿನ ಶಾಂತಚಿಂತನೆ, ಆತ್ಮತತ್ತ್ವದ ನಿಗೂಢ ರಹಸ್ಯ, ಆತ್ಮ ಮತ್ತು

ಇಂದ್ರಿಯಗಳ ಸಂವಾದ ಆತ್ಮದ ಹಿರಿಮೆ ಹಾಗೂ ಗರಿಮೆ ಹೀಗೆ ನಾನಾಸ್ತರದ ವಿಷಯಗಳನ್ನು ಛಾಂದೋಗ್ಯ ಉಪನಿಷತ್ತು ಸಾರವತ್ತಾಗಿ ತಿಳಿಸುತ್ತದೆ.

## 10) ಬೃಹದಾರಣ್ಯಕ ಉಪನಿಷತ್

ಬೃಹದಾರಣ್ಯಕವು ಶುಕ್ಲಯಜುರ್ವೇದಕ್ಕೆ ಸೇರಿದುದು. ಆಕೃತಿಯಲ್ಲಿ ಬಹು ದೊಡ್ಡದಾಗಿರುವುದರಿಂದ (ಬೃಹತ್) ಮತ್ತು ಅರಣ್ಯದಲ್ಲಿ ಅನುಸಂಧಾನ ಮಾಡುವಂತಹದ್ದಾಗಿರುವುದರಿಂದ (ಅರಣ್ಯಕ) ಬೃಹದಾರಣ್ಯಕವಾಗಿದೆ. ಮಧುಕಾಂಡ, ಮುನಿಕಾಂಡ, ಮತ್ತು ಖಿಲಕಾಂಡವೆಂದು, ಆರು ಆಧ್ಯಾಯಗಳಿಂದ ಕೂಡಿದ ಮೂರು ಕಾಂಡಗಳಿವೆ. ವಿರಾಟಪುರುಷನ ವರ್ಣನೆ, ಅಜಾತಶತ್ರು ಮತ್ತು ಶಾಕಲರೊಡನೆ ಆತ್ಮ ವಿಚಾರವಾಗಿ ನಡೆದ ಸಂಭಾಷಣೆ, ಮಹರ್ಷಿ ಯಾಜ್ಞವಲ್ಕ್ಯ ಹಾಗೂ ಬ್ರಹ್ಮವಾದಿನಿ ಮೈತ್ರೇಯಿಯರ ಬ್ರಹ್ಮವಿಚಾರದ ಸಂವಾದ, ಜನಕನ ಆಸ್ಥಾನದಲ್ಲಿ ತತ್ವಜ್ಞಾನಿಗಳೊಂದಿಗೆ ವಿಮರ್ಶಿತವಾದ ಆತ್ಮತತ್ವ ವಿಚಾರ, ಜನಕ ಹಾಗೂ ಯಾಜ್ಯವಲ್ಕ್ಯರ ಸಂವಾದ, ವಿಶ್ವ ಅದರ ಉತ್ಪತ್ತಿ ಪಂಚೇಂದ್ರಿಯಗಳ ಕ್ರಿಯೆಯನ್ನು ಬಿಂಬಿಸುವ ವಿವರಣೆಯು ಬೃಹದಾರಣ್ಯಕದಲ್ಲಿ ಶೋಭಿತವಾಗಿದೆ.

ಆತ್ಮದರ್ಶಿಯಾದ ಮಹರ್ಷಿ ಯಾಜ್ಞವಲ್ಕ್ಯ, ತ್ಯಾಗಮಯಿ ಮೈತ್ರೇಯಿ, ಬ್ರಹ್ಮವಾದಿನಿ ಗಾರ್ಗಿ, ಹಾಗೂ ರಾಜರ್ಷಿ ಜನಕ ಇವರ ವ್ಯಕ್ತಿತ್ವ ಸಂಭಾಷಣೆ ಹಾಗೂ ಸಂದೇಶಗಳು ಸರ್ವಾದರಣೀಯವಾಗಿವೆ.

ಆತ್ಮ ವಿದ್ಯೆಯನ್ನು ಕುರಿತು ಆಮೂಲಾಗ್ರವಾಗಿ ವಿವರಿಸುತ್ತಾ ಆತ್ಮ ವಿದ್ಯೆಯ ಬಗ್ಗೆ ಸಕಲ ವಿವೇಚನೆ, ವಿವರಣೆ ಮತ್ತು ವಿಶದೀಕರಣದೊಂದಿಗೆ ಸರ್ವಾಂಗ ಸುಂದರವಾಗಿ ಸಮರ್ಥನೀಯವಾಗಿ ಅಧ್ಯಾತ್ಮವಿದ್ಯೆಯ ಸರ್ವವಿಚಾರವನ್ನು ಸಾಧಕರಿಗೆ ನಿರೂಪಿಸಿರುವ ಬೃಹದಾರಣ್ಯಕವು ಸರ್ವದಾ ಸರ್ವಮಾನ್ಯವಾಗಿದೆ.

ಆತ್ಮವನ್ನು ಅರಿಯುವ ಪರಿ, ಅದರೊಂದಿಗೆ ಸಾಗುವ ಹಾದಿ, ಅರ್ಥೈಸಿಕೊಳ್ಳುವ ನಾನಾವಿಧ, ಸರ್ವರೂಪ ಸ್ವರೂಪಗಳೂ ತನ್ನಲ್ಲೇ ಇರುವ ಬಗ್ಗೆ, ಆತ್ಮ ಜ್ಯೋತಿಯು ಎಲ್ಲಾ ರೂಪದಲ್ಲೂ ಪ್ರಕಟವಾಗುವ ರೀತಿ, ಹೀಗೆ ನಾನಾ ಹ0ತಗಳನ್ನು ವಿವರಿಸುತ್ತಾ, ಸಾಧಕವು ಸಾಧಕನೂ ಒಂದೇ ಎಂಬ ಐಕಮತ್ಯವನ್ನು ಹೊಂದಿ ತಾದಾತ್ಮ್ಯ ಭಾವವನ್ನು ಪಡೆಯುವ ಬಗ್ಗೆ ಬೃಹದಾರಣ್ಯಕವು ಬಹಳ ಚೆನ್ನಾಗಿ ನಿರೂಪಿಸಿದೆ.

ಬುದ್ಧಿಯು ಲಭಿಸಿದೆ. ಮರ್ಕಟ ಮನಸ್ಸು ಅದನ್ನು ಸರಿಯಾಗಿ ಲಗಾಮು ಹಾಕಿ ಸೂಕ್ತ ದಾರಿಯಲ್ಲಿ ನಡೆಸಿಕೊಂಡು ಹೋಗಬೇಕು. ಪ್ರೇರಕ ಪ್ರೇರಣೆಯಿಂದ ಎಲ್ಲವೂ ನಡೆಯುವುದು ನಿಜ. ಸತ್ತ್ವ, ರಜಸ್, ತಮೋ ಗುಣಗಳಿಂದ ಅಂದರೆ ಸಾತ್ವಿಕ ಮಿಶ್ರಿತ ಹಾಗೂ ಮಂದ ಗುಣಗಳಿಂದ ಮನಸ್ಸು ಕೂಡಿದೆ. ನಮ್ಮ ಆಸೆ ಆಕಾಂಕ್ಷೆಗಳು ಯಾವ ಗುಣದೊಂದಿಗೆ ಭರಿತವಾಗುವುದೋ ಅದರಂತೆಯೇ ಫಲ ಪ್ರಾಪ್ತಿಯಾಗುವುದರಿಂದ ರಾಗದ್ವೇಷಗಳು ಜೊತೆಯಲ್ಲಿ ಸೇರಿಕೊಳ್ಳುವುದು. ಆಸೆ, ದುರಾಸೆಯಿಂದ ಕಾರ್ಯದ ರೂಪ ಬದಲಾಗುವುದು.

ವಿತ್ತೈಷಣಾ, ಪುತ್ರೈಷಣಾ, ದಾರೈಷಣಾ ಹೀಗೆ ನಾನಾವಿಧದ ರಜೋಗುಣ ಪ್ರಧಾನವಾದ ಆಸೆಯು ನುಗ್ಗುವುದು. ಆದ್ದರಿಂದ ಮುಂದೆ ತಾಮಸೀ ಪ್ರವೃತ್ತಿಯು ಮನೆಮಾಡುವುದು. ಅಹಂಕಾರವು ಬೆಳೆಯುವುದು. ದುರಹಂಕಾರಕ್ಕೆ ತಿರುಗುವುದು. ಆಸೆ, ಅತಿಆಸೆ, ದುರಾಸೆ, ದೂರದಾಸೆ, ಎಂದೆಂದಿಗೂ ಬೇಕು, ಇನ್ನಷ್ಟು ಬೇಕು, ಮತ್ತಷ್ಟು ಬೇಕು, ಮಗದಷ್ಟು ಬೇಕು, ಹೀಗೆ ಬೇಕು ಬೇಕೆಂಬ ತೀರದ ಬಯಕೆ ಉಲ್ಬಣಗೊಳ್ಳುತ್ತಾ ಹೋದಷ್ಟೂ ಪರಿಪರಿ ಕಷ್ಟಕಾರ್ಪಣ್ಯಗಳು ಮನೆ ಮಾಡುವುವು. ಮರ್ಕಟಬುದ್ಧಿಯನ್ನು ತಿಳಿವಳಿಕೆಯ ಛಾಟಿಯಿಂದ ಹತೋಟಿಯಲ್ಲಿಟ್ಟು ಸರಿಯಾದ ಮಾರ್ಗದಲ್ಲಿ ನಡೆಸಬೇಕಾದ್ದು ಜೀವಿಯ ಆದ್ಯ ಕರ್ತವ್ಯ.

ನಾನಾವಿಧ ಮದ ಮಾತ್ಸರ್ಯ ಅಹಂಕಾರಗಳ ಹಿಡಿತಕ್ಕೆ ತ್ಯಾಗದ ಬುದ್ಧಿ ಬೆಳೆಯಬೇಕು. ತ್ಯಾಗದಿಂದ ಅರಿಷಡ್ವರ್ಗವನ್ನು ಅದರ ಪರಿಣಾಮವನ್ನು ನಿವಾರಿಸಿಕೊಳ್ಳಬೇಕೆಂಬುದನ್ನು ಮನಗಂಡ ಋಷಿ ವರೇಣ್ಯರು ಕಠಮಂಡೂಕಾದಿ ಉಪನಿಷತ್ತುಗಳಲ್ಲಿ ತ್ಯಾಗ ಜೀವನದ ಅವಶ್ಯಕತೆಯನ್ನು ಪ್ರತಿಪಾದಿಸಿದರು.

ಜೀವಿಯ ಅಂತಃಶಕ್ತಿಯಿಂದ ಜ್ಯೋತಿಸ್ವರೂಪವಾದ, ಅನುಭವವೇದ್ಯವಾದ ಆತ್ಮ, ಅದನ್ನು ಅರಿಯುವುದು, ಮೊದಲಾದ ವಿಚಾರವು ಪ್ರಕಾಶಿತವಾಯ್ತು. ಬಹಳ ಸುಂದರ ಉದಾಹರಣೆಯಿಂದ ಅದರ ಸ್ವರೂಪವನ್ನು ಉಪನಿಷತ್ತು ಚಿತ್ರಿಸಿದೆ. ಉದಾಹರಣೆಗೆ ಆಲದ ಬೀಜವನ್ನು ಕುರಿತು ತಿಳಿಸುತ್ತದೆ.

ಒಂದು ಹಣ್ಣು, ಅದರೊಳಗೆ ಎಷ್ಟು ಬೀಜಗಳು, ಅದರಲ್ಲಿ ಒಂದು ಬೀಜ ಬಿತ್ತಿದಾಗ ಭೂಮಿಯ ಜೊತೆ ಬೆರೆತು ರಸವನ್ನು ಹೀರಿ ತನ್ನ ಸ್ವಂತಿಕೆಯ ಗುಣದಿಂದ ಮೊಳಕೆಯ ರೂಪದಲ್ಲಿ ಪ್ರಕಟವಾಗಿ ಗಿಡವಾಗಿ ಮರವಾಗಿ ಬೆಳೆದು ತನ್ನ ವಿಸ್ರೃತ ಬಾಹುವನ್ನು ಎಲ್ಲಾ ದಿಕ್ಕಿನಲ್ಲಿಯೂ ಹರಡುವುದು. ಆಲದ ಮರದ ಸಂಪೂರ್ಣ ವ್ಯವಸ್ಥೆ ಆ ಸಣ್ಣ ಬೀಜದಲ್ಲಿ ಹೇಗಿತ್ತು? ಅಷ್ಟು ಸ್ಥೂಲಗುಣಗಳು ಬಹು ಸೂಕ್ಷ್ಮವಾಗಿ ಹೇಗಿರಲು ಸಾಧ್ಯ? ಹೀಗೆ ನಾನಾ ಆಗು ಹೋಗು ವಿಚಾರವನ್ನು ತಿಳಿಸುತ್ತಾ ಬ್ರಹ್ಮದ ವ್ಯಕ್ತ ಅವ್ಯಕ್ತ ಭಾವ, ಅದರ ಸೂಕ್ಷ್ಮತೆ ಹಾಗೂ ಸ್ಥೂಲತೆ ಮೊದಲಾದ ವಿಶಿಷ್ಟಗುಣಗಳನ್ನು ಉಪನಿಷತ್ತುಗಳು ತಿಳಿಸಿದವು.

ವಿಶಿಷ್ಟ ಗುಣಯುಕ್ತವಾದ, ಸರ್ವಶಕ್ತನಾದ, ಅವ್ಯಕ್ತವಾದ, ಆ ದಿವ್ಯ ಸ್ವರೂಪವೇ ಬ್ರಹ್ಮ. ಅದು ಎಲ್ಲೆಲ್ಲಿಯೂ, ಎಲ್ಲದರಲ್ಲೂ ಇದೆ. ಎಂಬ ವಿಚಾರವಾಗಿ ತತ್ವಮಸಿ ಎಂಬ ಮಹಾವಾಕ್ಯದ ಮೂಲಕ ತೋರ್ಪಡಿಸಿ ಅದರ ಭಿನ್ನ ಭಿನ್ನ ಉಪಾಧಿಯನ್ನು ಲೋಕಕ್ಕೆ ಸಾರಿದವು. ನೋಟಕ್ಕೆ ಚೆಂದ ಕಂಡರೂ ಭೌತಿಕ ಬದುಕು ಅಸ್ಥಿರ.

ಆತ್ಮಜ್ಯೋತಿಯ ಶೋಧನೆಯ ಮೂಲಕ ಜಗತ್ತು ಇಚ್ಛಾಶಕ್ತಿ, ಜ್ಞಾನಶಕ್ತಿ ಹಾಗೂ ಕ್ರಿಯಾಶಕ್ತಿ ಎಂಬ ಮೂರು ಮಹಾಶಕ್ತಿಯನ್ನು ಪಡೆಯಬೇಕು. ಅದನ್ನು ಪಡೆಯಲು ಉಪಾಸನಾವಿದ್ಯೆ ಅಂದರೆ ಭಕ್ತಿ ಮಾರ್ಗದಿಂದ ಸಾಧ್ಯವೆಂಬುದನ್ನು ಛಾಂದೋಗ್ಯ ಉಪನಿಷತ್ತು ನಿರೂಪಿಸಿದೆ.

ವಸ್ತುವಿಷಯಗಳ ಇರುವಿಕೆಯ ಅರಿವು, ಅವುಗಳನ್ನು ಪಡೆಯುವ ಬಗ್ಗೆ, ಅದರಿಂದಾಗುವ ಅನುಕೂಲ ಅನಾನುಕೂಲಗಳು, ವಸ್ತು ವಿಚಾರಗಳ

ಕ್ರಿಯೆ, ದೈಹಿಕ, ಮಾನಸಿಕ ಕ್ರಿಯೆ ಹೀಗೆ ಪ್ರತಿಯೊಂದರ ಭಿನ್ನ ವಿಷಯದ ಕಡೆಗೆ ಎಲ್ಲದರ ಅಂತಿಮ ಗುರಿ ಜ್ಞಾನ. ಆತ್ಮ ಜ್ಯೋತಿ ದರ್ಶನ, ಆತ್ಮ ದರ್ಶನದ ಮೂಲಕ ಸರ್ವವಿಧ ಸಾಧನೆ ಮತ್ತು ಧರ್ಮ ಪ್ರತಿಪಾದಿತವಾದ ಸನ್ಮಾರ್ಗದಲ್ಲಿ ಸಾಗಿ ಸಾಕ್ಷಾತ್ಕಾರವನ್ನು ಸಾಧಿಸಿದ ಸುಕೀರ್ತಿ ಸಿದ್ಧಿಸುವುದು.

ಆಚಾರ್ಯ ಶಂಕರಾದಿಯಾಗಿ ಮಹಾದಾರ್ಶನಿಕರು ಭಿನ್ನ ಭಿನ್ನವಾಗಿ ಕಾಣುವ ಶ್ರುತಿವಾಕ್ಯವನ್ನು ವಿಭಿನ್ನವಾದ ತತ್ವನಿರೂಪಣೆಯ ಪ್ರಕಾರವೆಂಬುದಾಗಿ ವ್ಯಾಖ್ಯಾನಿಸಿ ಯುಕ್ತಿಯ ಚೌಕಟ್ಟಿನಲ್ಲಿ ಸತ್ಯವನ್ನು ನೆಲೆನಿಲ್ಲಿಸಿ ಸತ್ಯವೇ ನಿತ್ಯ. ನಿತ್ಯವೇ ಸತ್ಯ. ಅದೇ ಜ್ಞಾನ, ಅದೇ ಅನಂತ, ಅದೇ ಬ್ರಹ್ಮ, ಇದೇ ಜಗಜ್ಜಾಲಕ್ಕೆ ಕಾರಣ ಎಂದು ವಿಶ್ವಕ್ಕೆ ಸಾರಿದ್ದಾರೆ. ಇದನ್ನರಿಯಲು ಯೋಗ ಮಾರ್ಗ, ಭಕ್ತಿ, ಉಪಾಸನೆ, ಎಲ್ಲವೂ ಸಾಧನೆ. ಈ ಕ್ರಮದಿಂದ ಅರಿತಾಗ ಅದೇ ನಿತ್ಯ ಸತ್ಯ ವ್ಯಾಪಕವಾದ ಜ್ಞಾನಾತ್ಮವಾಗುವುದು, ಅದಕ್ಕಿದಕ್ಕೆ ಭೇದವಿಲ್ಲ, ಎಂಬುದೇ ಪರಮ ತತ್ವವಾದ ಉಪನಿಷತ್ತಿನ (ವೇದಾಂತದ) ರಹಸ್ಯ.

ಆದುದರಿಂದ ವಂಶ ಪಾರಂಪರ್ಯವಾಗಿ ಅಂದರೆ ಅನೂಚಾನವಾಗಿ ಬಂದಿರುವ ಉಪನಿಷತ್ತುಗಳ ಸಂದೇಶ, ಅವು ಹಾಕಿ ಕೊಟ್ಟಿರುವ ಅನುಭವಾತ್ಮಕಮಾರ್ಗ, ಅವುಗಳ ಅಧ್ಯಯನ ಅನುಸರಣೆಯ ಮಾರ್ಗವನ್ನು ನಮ್ಮದಾಗಿಸಿ ಉಳಿಸಿಕೊಳ್ಳಬೇಕು. ಅದಕ್ಕೆ ಅವುಗಳ ಸಮಗ್ರ ಅಧ್ಯಯನ ಅವಶ್ಯಕ.

ಉಪನಿಷತ್ತುಗಳ ಜ್ಞಾನದಲ್ಲಿ ಸ್ವಲ್ಪವನ್ನಾದರೂ ನಮ್ಮ ಬದುಕಿನೊಳಗೆ ಅಳವಡಿಸಿಕೊಂಡರೆ ನಮ್ಮ ಬದುಕು ಹೊಸ ಶಕ್ತಿ, ಹೊಸ ನಿರ್ಧಾರ, ಹೊಸ

ನೀತಿ, ನಿಷ್ಠೆಯಿಂದ ಹಸನಾಗುವುದು. ಸ್ವಲ್ಪವಾದರೂ ಧರ್ಮ ಮಾರ್ಗಗಳನ್ನು ನಮ್ಮದಾಗಿಸಿಕೊಳ್ಳಿ. ಅದು ನಮ್ಮನ್ನು ಎಲ್ಲಾ ಭಯದಿಂದ ದೂರವಿಡುತ್ತದೆ. ನಿರ್ಭೀತಿಯಿಂದ ಜೀವನ ಸಾಗಿಸಿ ಎಚ್ಚರಗೊಳ್ಳಿ, ಜಾಗ್ರತರಾಗಿರಿ, ಸಶಕ್ತರಾಗಿರಿ, ವಿಕಸಿತ ಜೀವನವನ್ನು ಪಡೆಯಿರಿ, ಪ್ರೇಮಮಯವಾಗಿ ಬದುಕಿರಿ. ಸಾಕ್ಷಾತ್ಕಾರ ಪಡೆಯಿರಿ.

ಸತ್ಯ ಮಾರ್ಗವನ್ನು ಎಂದೂ ಬಿಡಬೇಡಿ, ಪರೋಪಕಾರಿಗಳಾಗಿ ಜೀವಿಸಿ. ನಿರಂತರ ಶಾಶ್ವತವಾದ ಸತ್ಯತೆ ನಿಮಗೆ ಅಮೃತತ್ವವನ್ನು ಕರುಣಿಸುವುದು. ಎಲ್ಲಾ ಪ್ರಗತಿಪರ ಚಿಂತನೆಯನ್ನು ನಿಮ್ಮದಾಗಿಸಿಕೊಳ್ಳಿ. ಅನೇಕ ಪರಿಮಿತಿಗಳೊಳಗೆ ಬಂಧಿತ ಬದುಕಿನಿಂದ ಮುಕ್ತರಾಗಿ, ಮೊದಲಾದ ದಿವ್ಯವಾದ ಅಮರವಾದ ಅಮೃತಮಯ ಸಂದೇಶವನ್ನು ಉಪನಿಷತ್ತುಗಳು ನಮಗೆ ಕರುಣಿಸಿವೆ. ಆದುದರಿಂದ ಬುದ್ಧಿಮತ್ತೆಯಿಂದ ಅಧ್ಯಯನ ಮಾಡಿ ಅಭ್ಯಾಸಿಗಳಾಗಬೇಕು. ಹಾಗಾದಾಗ ಸಮಕಾಲೀನ ಚಿಂತನೆಯಿಂದ ಸರ್ವವಿಧ ಅನುಕೂಲಗಳನ್ನು ಪಡೆಯಬಹುದು.

ಮಾನವನು ಪಡೆಯಬಹುದಾದ ಅತ್ಯಂತ ವಿಶಿಷ್ಟ ಉಡುಗೊರೆಯೆಂದರೆ ದೇಹ ಹಾಗೂ ಅದರಲ್ಲಿನ ಸೌಷ್ಠವಪೂರ್ಣ ಅಂಗಗಳು. ಅದನ್ನು ಸರಿಯಾಗಿ ಶ್ರುತಿ ಮಾಡಿದಾಗ ಒಳ್ಳೆಯ ಸಂಗೀತ ಹೊರಹೊಮ್ಮುವುದು. ಒಳ್ಳೆಯ ವಿದ್ಯಾರ್ಜನೆ ಮಾಡಿದಾಗ ಜ್ಞಾನಾರ್ಜನೆಯ ಹಾದಿಯನ್ನು ಹಿಡಿಯುವುದು.

ನೀವು ಎಷ್ಟು ಶಿಸ್ತಿನಿಂದ ಅದನ್ನು ಬೆಳೆಸಿ ಪೋಷಿಸುವಿರೋ, ಆ ನಿಟ್ಟಿನಲ್ಲಿ ಅದು ಪಯಣಿಸುವುದು. ವಿಶ್ವದಲ್ಲಿ ಧರ್ಮಮಾರ್ಗದ ತಂತ್ರವೇ

ಹೀಗೆ. ದೈಹಿಕ ಹಾಗೂ ಮಾನಸಿಕ ಕ್ರಿಯೆಗಳನ್ನು ಎಚ್ಚರಿಕೆಯಿಂದ ನೋಡಿಕೊಳ್ಳಬೇಕೆಂದು ಉಪನಿಷತ್ತು ಸ್ಪಷ್ಟವಾಗಿ ಸಾರಿದೆ. ಲೌಕಿಕ ಕ್ರಿಯೆಯೇ ಇರಲಿ, ಧಾರ್ಮಿಕ ಕ್ರಿಯೆಯೇ ಇರಲಿ, ದೈಹಿಕ ಹಾಗೂ ಮಾನಸಿಕ ಸ್ಥಿತಿ ಸರಿಯಾಗಿರಬೇಕಾದ್ದು ಅತ್ಯಂತ ಅವಶ್ಯಕವು.

ಒಳ್ಳೆಯ ಆರೋಗ್ಯ, ಸುಖಕರ ಶಿಸ್ತಿನ ಜೀವನ, ಉತ್ತಮ ವಿದ್ಯಾಭ್ಯಾಸ ಇದಕ್ಕೆ ಪೂರಕವು. ಹಾಗಾಗಿ ಈ ನಿಟ್ಟಿನಲ್ಲಿ ನಿಮ್ಮ ಜೀವನ ಮಾರ್ಗವನ್ನು ಬೆಳೆಸಿರಿ. ಜೀವನದ ಆನಂದ ರಸವನ್ನು ಅನುಭವಿಸಿ. ಜನ್ಮವನ್ನು ಸಾರ್ಥಕಗೊಳಿಸಿಕೊಳ್ಳಿ. ಪರರಿಗೆ ಸಹಾಯ ಮಾಡುತ್ತಾ ಪರವಸ್ತುವಿನಲ್ಲಿ ಪ್ರೀತಿ ವಿಶ್ವಾಸವನ್ನು ಬೆಳೆಸಿಕೊಂಡು ಎಲ್ಲಾ ಮತಗಳನ್ನು, ಆಚಾರ ಪರಂಪರೆಯನ್ನು ಗೌರವಿಸುತ್ತಾ ವಿಶ್ವಾಸ ಪೂರ್ವಕವಾಗಿ, ಸ್ನೇಹ ಪರವಾಗಿ ಔದಾರ್ಯದ ಬದುಕನ್ನು ನಿಮ್ಮದಾಗಿಸಿಕೊಳ್ಳಿ ಎಂದು ಉಪನಿಷತ್ತು ವಿಧವಿಧದಲ್ಲಿ ಸಾರುತ್ತಿದೆ.

ಜೀವನದ ನಾನಾಸ್ತರದ ವಿಚಾರಗಳನ್ನು ಪ್ರಸ್ತುತ ಪಡಿಸಿ ಸಮಸ್ಯೆಗೆ ಪರಿಹಾರ ಮಾರ್ಗೋಪಾಯಗಳನ್ನು ಸೂಚಿಸಿ ಸಾರ್ವಕಾಲಿಕ ಮೌಲ್ಯವನ್ನು ಬೋಧಿಸುತ್ತಿರುವ ಉಪನಿಷತ್ತುಗಳು ಸರ್ವಾಧರಣೀಯವೇ ಆಗಿವೆ.

ಸಾಧನಾ ಜೀವನವನ್ನು ಬಯಸುವವರು ಎಲ್ಲದರಲ್ಲೂ ಎಲ್ಲರಲ್ಲೂ ಪ್ರೀತಿಯನ್ನು ಬೆಳೆಸಿಕೊಂಡು ಮನುಷ್ಯಜನ್ಮದ ಸಾರ್ಥಕ್ಯವನ್ನು ಸಾಧಿಸುತ್ತಾರೆ.

ಪರಿಪೂರ್ಣವಾದ ಜೀವನದ ಅನುಭವ ಉತ್ತಮವಾದ ದೈವತ್ವವನ್ನು ದರ್ಶಿಸುತ್ತದೆ. ಆತ್ಮ ಸ್ವರೂಪವಾದುದೇ ಆ ದೈವ. ಎಲ್ಲರಲ್ಲೂ ಆತ್ಮವಿದೆ. ಬಡವನಾಗಲಿ ಶ್ರೀಮಂತನಾಗಲಿ ಯಾವ

ಮತೀಯನೇ ಆಗಲಿ ಲೌಕಿಕ ಸಂಬೋಧನೆಗಳೆಲ್ಲವು ಕೇವಲ ಬಾಹ್ಯ ವಿಚಾರಕ್ಕೆ ಸೀಮಿತವು. ಅಂತರ್ದರ್ಶನದಲ್ಲಿ ಎಲ್ಲಾ ಆತ್ಮವೂ ಒಂದೇ, ಒಂದು ಅನೇಕವಾಗಿದೆ. ಯಾರೂ ಕೀಳಲ್ಲ, ಯಾರೂ ಮೇಲಲ್ಲ. ಹುಟ್ಟಿದಾಗ ಜೊತೆಗೆ ಏನೂ ತರಲಿಲ್ಲ.

ಹೋಗುವಾಗಲೂ ಏನನ್ನೂ ತೆಗೆದುಕೊಂಡು ಹೋಗಲಾಗುವುದಿಲ್ಲ, ಇಷ್ಟೆಲ್ಲ ವಿಷಯ ತಿಳಿದಿದ್ದರೂ ತಾರತಮ್ಯವೇಕೆ? ನಿಮ್ಮ ದೊಡ್ಡಸ್ತಿಕೆ ಅಧ್ಯಾತ್ಮ ವಿಷಯದಲ್ಲಿ ಇರಲಿ. ಕೇವಲ ದೈಹಿಕ ಆಮುಷ್ಮಿಕ ಸುಖಭೋಗಗಳಲ್ಲಿ ಅಲ್ಲ. ವ್ಯಕ್ತಿ ವಿಕಸನದಲ್ಲಿ ಮಹೋನ್ನತಿಯನ್ನು ಸಾಧಿಸಿ. ಐಶ್ವರ್ಯವನ್ನು ಗಂಟುಹಾಕುವುದರಲ್ಲಿ ಅಲ್ಲ. ಆಗ ನಿಮಗೆ ಎಲ್ಲರೂ, ಎಲ್ಲವೂ ಸಮಾನವಾಗಿ ಗೋಚರಿಸುವುದು.

ಆಚಾರ್ಯಶಂಕರರು "ಯಾವ ಐಶ್ವರ್ಯವು ಇಲ್ಲದಿದ್ದರೂ ನಿತ್ಯ ತೃಪ್ತ ಆತ, ಯಾವ ಸಹಾಯವೂ ಇಲ್ಲದಿದ್ದರೂ ಆತ ಅತ್ಯಂತ ಬಲಶಾಲಿ, ಇಂದ್ರಿಯ ಸುಖಗಳನ್ನು ಅನುಭವಿಸದೇ ಹೋದರೂ ಆತ ನಿತ್ಯತೃಪ್ತ. ಎಲ್ಲರನ್ನು ಸಮಾನರಾಗಿ ಕಾಣುತ್ತಿದ್ದರು ಅವನ ಸಮಾನಕ್ಕೆ ಯಾರು ಇಲ್ಲ. ಸಾಕ್ಷಾತ್ಕಾರ ಪೂರಿತನು ಆತ್ಮ ದರ್ಶಕನು ಅವನೇ" ಎಂದು ಅನುಭವಾತ್ಮನನ್ನು ಕೊಂಡಾಡಿದ್ದಾರೆ. ಮನಸ್ಸಿನ ಸುಖದ ಧನ್ಯಭಾವದ ಉತ್ತುಂಗತೆಯನ್ನು ಅನೇಕ ಮಹಾಪುರುಷರು ಹೀಗೆ ತೋರಿ ನಡೆದಿದ್ದಾರೆ.

ಜನಿಸಿದ ನಂತರ ಜೀವಿಸಲೇಬೇಕೆಂಬ ರೀತಿಯ ಜೀವನ ಬೇಡ. ಜನ್ಮದ ಸಾರ್ಥಕ್ಯ ಹೇಗೆ? ಈ ನಿಟ್ಟಿನಲ್ಲಿ ಉಪನಿಷತ್ತು ನಮಗೇನು ಸಲಹೆ

ಕೊಡುತ್ತದೆ ಎಂದು ಚಿಂತಿಸಿ, ಅದರ ಅನುಸರಣೆಗೆ ಪ್ರಯತ್ನಿಸಿ. ಮಾನವರ ಸುಖಸಮೃದ್ಧಿ ಜೀವನಕ್ರಮ ಯೌವನಾವಸ್ಥೆಯಲ್ಲಿ ಪಕ್ವವಾಗಬೇಕು. ಹಾಗಾದಾಗ ಮಾತ್ರ ಮುಂದಿನ ಜೀವನ ಹಸನು ಮಾರ್ಗವನ್ನು ಹೊಂದಲು ಅವಕಾಶವಾಗುತ್ತದೆ. ಯುವಕನಾಗಲಿ ಯುವತಿಯಾಗಲಿ ಸರಿಯಾದ ಜೀವನ ಶೈಲಿ, ಜೀವನ ಕ್ರಮವನ್ನು ರೂಢಿಸಿಕೊಳ್ಳಬೇಕು.

ಕೇವಲ ತಾರುಣ್ಯವಷ್ಟೇ ಸಾಲದು. ಅದರೊಟ್ಟಿಗೆ ಇನ್ನಿತರ ಅವಶ್ಯ ಗುಣಗಳನ್ನು ಮೈಗೂಡಿಸಿಕೊಳ್ಳಬೇಕೆಂದು ಬೋಧಿಸುತ್ತದೆ.

ಅವೆಂದರೆ 1. ಒಳ್ಳೆಯತನ 2. ದೃಢವಾದ ಮನಸ್ಸು, ನಿದಿಷ್ಟ ಗುರಿ 3. ಸನ್ಮಾರ್ಗದ ನಡತೆ 4. ಉತ್ತಮ ವಿದ್ಯಾಭ್ಯಾಸ, ಸೃಜನಾತ್ಮಕ ಬುದ್ಧಿ ಶಕ್ತಿ ವಿಮರ್ಶಾ ದೃಷ್ಟಿಯಿಂದ ಕಲಿಕೆ 5. ಆಸೆ, ಆಕಾಂಕ್ಷೆ, ಭವಿಷ್ಯದಲ್ಲಿ ಸರಿಯಾದ ಕ್ರಮದಲ್ಲಿ ಬೆಳೆಯುವ ಬಗ್ಗೆ ಯೋಜನೆ, ಹಿಡಿತ ಅಥವ ಕಡಿವಾಣದ ಬೇಕು ಬೇಡಗಳು 6, ದೈಹಿಕ ಬಲ, ಆರೋಗ್ಯ ಕಾಪಾಡಿಕೊಳ್ಳುವುದು (ಹಿತಮಿತ ಆಹಾರ ವಿಹಾರ ಕ್ರಮದಿಂದ) ಮತ್ತು ಇವಿಷ್ಟೇ ಅಲ್ಲ, ಇವೆಲ್ಲದರ ಜೊತೆಗೆ ಜೀವನ ನಿರ್ವಹಣೆಗೆ ಬೇಕಾದ ಧನ ಸಂಪತ್ತು ಪಡೆಯುವಿಕೆ, ಹೀಗೆ ತಾರುಣ್ಯದಲ್ಲಿ ಸಂಪತ್ತನ್ನು ರೂಢಿಸಿಕೊಂಡಾಗ ಜೀವನ ಸುಪಥವನ್ನು ಹಿಡಿದು ಆನಂದದ ಮೆಟ್ಟಲನ್ನು ಏರಲು ಸಾಧ್ಯ.

ಪ್ರತಿಯೊಂದು ಶ್ರೇಣಿಯ ಜೀವಿಗಳು ಒಂದೊಂದು ತರನಾದ ಸುಖವನ್ನು ಪಡೆಯುತ್ತಾರೆ.

ಇಚ್ಛೆಗೆ ಅನುಸಾರವಾಗಿಯೋ, ಇಚ್ಛೆಯಿಲ್ಲದೆಯೋ, ಪರಿಸ್ಥಿತಿಯ ವೈಪರೀತ್ಯವೋ, ಹಿತಕರವೋ ಅಥವಾ ಯಾತನಾಪರವೊ, ಒಟ್ಟಿನಲ್ಲಿ

ಹೇಗೋ ಜೀವಿತವು ದೂಡಲ್ಪಡುತ್ತದೆ. ಹೀಗೇಕೆ ಆಗುವುದು? ಈ ಪರಿಯ ಜೀವನವಾದರೂ ಏತಕ್ಕೆ ಎಂಬ ಪ್ರಶ್ನೆಗೆ ಉಪನಿಷತ್ತುಗಳು ಹೀಗೆ ಉತ್ತರಿಸುತ್ತವೆ. ಇಂದ್ರಿಯಗಳಿಗೆ ಸ್ವೇಚ್ಛಾಚಾರವನ್ನು ಕೊಟ್ಟು ಅವುಗಳು ಹೋದದಾರಿಯಲ್ಲೇ ಅವನ್ನು ಬಿಟ್ಟು ಇಂದ್ರಿಯಾಧೀನವಾದ ಮನಸ್ಸಿನ ದಾಸ್ಯದಿ0ದ ಅಂದರೆ ಅಹಿತಕರ ಮನಸ್ಸಿನಿಂದ ದುಗುಡ ದುಮ್ಮಾನದ ಚಿಂತೆಯಿಂದ, ನಿರ್ದಿಷ್ಟ ಸಾಧನೆಯ ಪಥವನ್ನು ಹಿಡಿಯದೇ ಮನಸೋಇಚ್ಛೆ ಬೆಳವಣಿಗೆಯಿಂದ ನಾನಾವಿಧ ಕಷ್ಟಗಳಿಗೆ ನಾವೇ ಕಾರಣರಾಗಿದ್ದೇವೆ.

ತರುಣರು ಬದುಕಿನಲ್ಲಿ ಉತ್ಸಾಹದ ಚಿಲುಮೆಯಿಂದ ಹಿಗ್ಗುತ್ತಾರೆ. ಅವರ ಉತ್ಸಾಹವು ನಂದಬಾರದು. ಸೂಕ್ಷ್ಮಮತಿಗಳಾದ ಅವರು ಸದಾಕಾಲ ಲವಲವಿಕೆಯ ಸಾಧಕರಾಗಬೇಕು. ಧ್ಯೇಯಯುತರಾಗಬೇಕು. ಅದಕ್ಕೆ ಆಧ್ಯಾತ್ಮಿಕ ಹಿನ್ನಲೆಯ ಸಮಾಜ, ಪರಿಸರವಿರಬೇಕು. ಪ್ರಸ್ತುತ ನಮ್ಮ ಸಮಾಜದ ರೀತಿನೀತಿಗಳನ್ನು ವಿಮರ್ಶಿಸಿದಾಗ ನಾವೆತ್ತ ಹೋಗುತ್ತಿದ್ದೇವೆ? ನಮ್ಮ ಪರಿಜ್ಞಾನ ಕುಂಠಿತವಲ್ಲವೆ? ನಮ್ಮಲ್ಲಿ ಧಾರ್ಮಿಕ ಉತ್ಸಾಹ ಯಾವ ಮಟ್ಟದಲ್ಲಿದೆ? ನಾವು ನಮ್ಮ ಮತಧರ್ಮಗಳನ್ನು ಸರಿಯಾಗಿ ಅರ್ಥೈಸಿಕೊಂಡಿದ್ದೇವೆಯೇ? ನಮ್ಮ ಸ್ವಾರ್ಥ, ನಮ್ಮ ಆಸಕ್ತಿಗಳನ್ನು ಹ್ರಾಸಗೊಳಿಸುತ್ತದೆ. ನಂತರ ವ್ಯಕ್ತಿತ್ವವು ಕುಗ್ಗುತ್ತದೆ. ನಂತರ ದೈಹಿಕ ಮಾನಸಿಕ ಬಲವು ಪತನದ ದಾರಿಯಲ್ಲಿ ಬೀಳುತ್ತದೆ.

ವಾಸ್ತವ ಬದುಕಿನಲ್ಲಿ ಉಲ್ಲಾಸ ಭಾವವನ್ನು ಹೊಂದದವರು ಎಷ್ಟೇ ವಿಷಯ ಪರಿಣತಿ ಹೊಂದಿದ್ದರೂ, ವಿದ್ವಾಂಸ, ವಿಜ್ಞಾನಿಗಳಾಗಿದ್ದರೂ ಆಧ್ಯಾತ್ಮಿಕವಾಗಿ ಕುರುಡರೇ ಸರಿ. ತಮ್ಮ ಅಭಿಪ್ರಾಯ ಮಂಡನೆಗೆ ಅನೇಕ

ವಿಕಾರ ವಿಷಯಗಳನ್ನು ಹೊರಗೆಡಹುತ್ತಾ ಧರ್ಮವು ಇದೇ ಎಂದು ಪ್ರತಿಪಾದಿಸುತ್ತಾರೆ. ಸಾರಾಸಾರವಿಷಯಗಳನ್ನು ಗ್ರಹಿಸದ ಸಾಮಾನ್ಯರು, ಲೌಕಿಕ ಪ್ರಸ್ತುತ್ವವನ್ನು ಪ್ರತಿಪಾದಿಸುವವರೂ ಸುಲಭವಾಗಿ ಈ ಮಾರ್ಗದಲ್ಲಿ ಆಕರ್ಷಿತರಾಗುತ್ತಾರೆ. ನಿಜವಾದ ಧರ್ಮ, ಆಧ್ಯಾತ್ಮಿಕತೆ ಉತ್ಸಾಹವನ್ನು ಎಂದೂ ಚಿವುಟುವುದಿಲ್ಲ.

ಸನಾತನ ಹಿಂದೂ ಧರ್ಮದ ಯಾವ ಋಷಿಯಾಗಲಿ, ಸಂತನಾಗಲಿ, ಸಾಧಕನಾಗಲಿ ಪರಧರ್ಮವನ್ನು ಎಂದೂ ಎಲ್ಲೂ ದೂರಿಲ್ಲ. ಪರಧರ್ಮ ಸಹಿಷ್ಣುತೆಯು ಇಲ್ಲಿ ಹಾಸುಹೊಕ್ಕಾಗಿದ್ದುದರಿಂದಲೇ ಪ್ರಪಂಚದ ಮೂಲೆ ಮೂಲೆಯಿಂದ ಎಲ್ಲಾ ಧರ್ಮವು ಇಲ್ಲಿಗೆ ಬಂದು ನೆಲಸಿ ತನ್ನ ಅಸ್ತಿತ್ವವನ್ನು ಹಿಂದೂ ಧರ್ಮದ ಜೊತೆಗೆ ಬೆಸೆದುಕೊಂಡು ತನ್ನ ನೆಲೆಯನ್ನು ಸುಭದ್ರಗೊಳಿಸಿಕೊಂಡಿತು.

ಉಪನಿಷತ್ತುಗಳು ಅದರ ವಿಚಾರ ವೈವಿಧ್ಯತೆ ಹೇಗೆ ಪ್ರಪಂಚದ ಎಲ್ಲಾ ಧರ್ಮಗಳ ಮೇಲೆ ಪ್ರಭಾವ ಬೀರಿದೆ ಎಂಬುದರ ಬಗ್ಗೆ ಗಮನಹರಿಸೋಣ. ಉಪನಿಷತ್ತಿನ ಅನೇಕಾನೇಕ ವಿಚಾರಗಳು, ಕ್ರೈಸ್ತ ಯಹೂದಿ, ಇಸ್ಲಾಂ, ಜೋರೆಸ್ಟ್ರಿಯನ್, ಮೊದಲಾಗಿ ಪ್ರಪಂಚದ ಎಲ್ಲಾ ಧರ್ಮಗಳಲ್ಲಿ ಬಿಂಬಿತವಾಗಿವೆ.

ಕ್ರಿಸ್ತ ಶಕ 1ನೇ ಶತಮಾನದಲ್ಲಿ ಏಸುಕ್ರಿಸ್ತನ ಪ್ರತ್ಯಕ್ಷ ಶಿಷ್ಯನಾದ ಸಂತಥಾಮಸ್ ಕೇರಳಕ್ಕೆ ಬಂದಾಗ ಕ್ರೈಸ್ತ ಧರ್ಮವು, ಅದೇ ಸಮಯದಲ್ಲಿ ಯಹೂದ್ಯ ಧರ್ಮವು, 7ನೇ ಶತಮಾನದಲ್ಲಿ ಜೊರಾಸ್ಟ್ರಮತವು ಹಾಗೆಯೇ ಮುಸಲ್ಮಾನರ ಆಗಮನದಿಂದ ಇಸ್ಲಾಂ ಧರ್ಮವು ಭಾರತವನ್ನು

ಪ್ರವೇಶಿಸಿತು. ತಾಯಿಯು ಪ್ರೀತಿ ಆದರಗಳಿಂದ ಯಾವುದೇ ಮಗುವನ್ನು ಮುದ್ದಾಗಿ ಕಾಣುವ ಹಾಗೆ ವೇದಾಂತ ಋಷಿಗಳ ಆಧ್ಯಾತ್ಮಿಕ ದರ್ಶನದಿಂದ ಸ್ಫೂರ್ತಿ ಪಡೆದ ತಾಯಿಯ ಸ್ಥಾನ ಹೊಂದಿದ ಹಿಂದೂ ಸನಾತನ ಧರ್ಮವು ಎಲ್ಲಾ ಧರ್ಮಗಳನ್ನು ಲಾಲಿಸಿ, ಪೋಷಿಸಿ, ಕಾಪಾಡಿಕೊಂಡು ಬಂದಿದೆ.

ಇದೊಂದು ವಿಶಿಷ್ಟ ಪ್ರಕಾರ. ಶಾಂತಿ, ಸಹನೆ, ಸಹಬಾಳ್ವೆಯ ದಿವ್ಯಮಂತ್ರದ ಅನುಭವ, ವೇದಾಂತ ಋಷಿಗಳ ಮೂಲಕ ವಂಶವಾಹಿನಿಯಾಗಿ ಭಾರತೀಯರ ರಕ್ತದ ಕಣಕಣದಲ್ಲೂ ಹರಿಯುತ್ತಿರುವುದನ್ನು ಇಡೀ ವಿಶ್ವವೇ ಗಮನಿಸಿದೆ. ಭಾರತೀಯರ ಶಾಂತಿಪರ ಜೀವನ ಶೈಲಿಯನ್ನು ಎಷ್ಟು ವಿಮರ್ಶಿಸಿದರೂ ಸಾಲದು. ಹಾಗೆಯೇ ಬೇರೆ ಬೇರೆ ಧರ್ಮಗಳು ಆತ್ಮದರ್ಶನ ಭಕ್ತಿಮಾರ್ಗ ಮೊದಲಾದ ಭಾರತೀಯತೆಯನ್ನು ತಮ್ಮದಾಗಿಸಿಕೊಂಡು ಬೆಳೆದಿವೆ, ಬೆಳೆಯುತ್ತಿವೆ.

ಕ್ರೈಸ್ತ ಧರ್ಮದ ವಿಚಾರರಹಿತ ನಂಬಿಕೆಗಳು, ಹಲಕೆಲವು ಇತಿ ಮಿತಿಗಳೊಂದಿಗೆ ಇತರ ಮತಗಳೊಂದಿಗೆ ಇರಲಿ ತನ್ನ ಮತೀಯ ಒಳಗುಂಪುಗಳೊಂದಿಗೂ ಕಾದಾಡುತ್ತಿತ್ತು.

ಉಪನಿಷತ್ತಿನ ( ವೇದಾಂತದ) ವಿಷಯಗಳು ಅದರ ಮೇಲೆ ಸಾಕಷ್ಟು ಪ್ರಭಾವ ಬೀರಿ ವಿಚಾರಕ್ರಾಂತಿಯತ್ತ ಅದನ್ನು ಕೊಂಡೊಯ್ಯುತ್ತಾ ಸ್ಥಿರಶಕ್ತಿಯನ್ನು ಬೆಳಸತೊಡಗಿದವು. ವಿಚಾರವಂತರು ಕ್ರೈಸ್ತ ಮತವು ಭಾರತೀಯ ವೇದಾ0ತ ಪರ0ಪರೆಯ ಚಿ0ತನೆಯೊ0ದಿಗೆ ತನ್ನ ಸ0ಬ0ಧವನ್ನು ಹೇಗೆ ಬೆಸೆದುಕೊ0ಡಿದೆ, ಅದರ ಅನುಪಮ ಸ್ಥಿರ ಶಕ್ತಿಯನ್ನು ತಾನು ಹೇಗೆ ತನ್ನದಾಗಿಸಿಕೊಳ್ಳಬೇಕು, ಆತ್ಮ, ಅಂತಶ್ಚೇತನ

ಇತ್ಯಾದಿ ಮನಸ್ಸಿನ ಒಳ ವಿಚಾರಗಳನ್ನು ತಿಳಿಯುವ ಪರಿ ಮೊದಲಾದ ವಿಚಾರಗಳತ್ತ ಬೆಳಕು ಚೆಲ್ಲಲು ವೇದಾಂತಮಾರ್ಗದ ಅವಶ್ಯಕತೆಯನ್ನು ಮನಗಂಡು ವೇದಾಂತಮಾರ್ಗದ ಅನೇಕಾನೇಕ ವಿಷಯಗಳನ್ನು ಮೈಗೂಡಿಸಿಕೊಂಡಿರುವ ವಿಚಾರವನ್ನು ವಿವರಿಸಿದ್ದಾರೆ.

ಭಾರತದಲ್ಲಿನ ಕ್ರೈಸ್ತಧರ್ಮಕ್ಕೆ ವೇದಾಂತದ ಅಗತ್ಯ ಬಹಳವಿದೆ, ಮೊದಲಾಗಿ ಅಭಿಪ್ರಾಯವನ್ನು ಕ್ರೈಸ್ತ ಸಾಹಿತ್ಯ ಸಂಘವು ಬಹಳಹಿಂದೆಯೇ ಪ್ರಕಟಿಸಿದೆ. ಕ್ರೈಸ್ತಧರ್ಮವು ಅನುಭಾವವಿಚಾರಗಳಿಗೆ ಹೊಂದಿಕೊಂಡು ಭಕ್ತಿ ಮಾರ್ಗದಲ್ಲಿ ಚೆನ್ನಾಗಿ ಮುಂದುವರಿಯುತ್ತಿದೆ ಎಂದು ಅನೇಕ ದಾರ್ಶನಿಕರು ಅಭಿಪ್ರಾಯಪಟ್ಟಿದ್ದಾರೆ.

ಇಸ್ಲಾಮಿನ ಅನುಭವಾತ್ಮಕ ವೈಶಿಷ್ಟ್ಯಗಳಿಂದ ಕೂಡಿದ ಸೂಫಿಧರ್ಮವು ಉಪನಿಷತ್ತನ್ನು ಬಹಳಷ್ಟು ಅರ್ಥೈಸಿ ಮೈಗೂಡಿಸಿಕೊಂಡಿದೆ. ಪ್ರವಾದಿ ಮಹಮದರು ಬಹಳ ಆಳವಾಗಿ ದೇವರನ್ನು ಹಾಗೂ ಮನುಕುಲವನ್ನು ಪ್ರೀತಿಸಿ, ಪ್ರೇಮಮಯವಾದ ವಿಚಾರಗಳನ್ನು ಖುರಾನಿನಲ್ಲಿ ಪ್ರಸ್ತುತ ಪಡಿಸಿದ್ದಾರೆ.

ಖುರಾನಿನ ಉಲ್ಲೇಖದ ಕೆಲವು ಶ್ಲೋಕಗಳನ್ನು ಗಮನಿಸಿದಾಗ ಉಪನಿಷತ್ತಿನ ವಿಚಾರಗಳು ಎಷ್ಟು ಪ್ರಸ್ತುತವಾಗಿವೆ ಎಂದು ಕಾಣಬಹುದಾಗಿದೆ.

- ಭಗವಂತ - ಅವನಲ್ಲದೆ ಬೇರೆ ದೇವನಿಲ್ಲ.
- ನಿತ್ಯ ಜೀವಂತನಾದ, ಸರ್ವವನ್ನು ಪಾಲಿಸುವ .

- ಜಡತೆ, ನಿದ್ದೆ ಅವನನ್ನು ಆಕ್ರಮಿಸುವುದಿಲ್ಲ.
- ಸ್ವರ್ಗದಲ್ಲಿರುವುದು ಭೂಮಿಯಲ್ಲಿರುವುದು ಎಲ್ಲವೂ ಅವನಿಗೇ ಸೇರಿದ್ದು.
- ಅವನ ಮುಂದೆ ಯಾರನ್ನೇ ಬೆಂಬಲಿಸಲು ಯಾರಿದ್ದಾರೆ?
- ಅವನ ಅಪ್ಪಣೆಯಿಲ್ಲದೆ ಅವರ ಮುಂದೆ ಏನೂ ಇರುವುದಿಲ್ಲ.
- ಅವನ ಜ್ಞಾನದ ಯಾವುದೇ ಭಾಗವನ್ನು ಯಾವುವೂ ಸುತ್ತುಗಟ್ಟುವುದಿಲ್ಲ.
- ಅವನು ಎಲ್ಲಕ್ಕಿಂತ ಮೇಲಿದ್ದಾನೆ. ಅತ್ಯುನ್ನತ ಅತ್ಯುನ್ನತ. (2ನೇ ಪ್ರಕರಣ 255)
- ಮುಕ್ತಿ ಎಂಬುದು ಮುಸ್ಲಿಮರ ಏಕಸ್ವಾಮ್ಯವಲ್ಲ ಎಂದು (2ನೆಯ ಅಧ್ಯಾಯ 62ನೆಯ ಶ್ಲೋಕ) ಖುರಾನ್ ಸ್ಪಷ್ಟಪಡಿಸಿದೆ.
- ಧರ್ಮಸಹಿಷ್ಣುತೆ, ಗೌರವಯುತವಾಗಿ ಇತರರನ್ನು ಕಾಣುವ ಉನ್ನತ ಮೇಲ್ಪಂಕ್ತಿಯನ್ನು ಹಾಕಿಕೊಟ್ಟ ಪ್ರವಾದಿಗಳು ಧಾರ್ಮಿಕ ಸಹನೆ ಸಹಬಾಳ್ವೆಯನ್ನು ಎತ್ತಿ ಹಿಡಿದಿದ್ದಾರೆ.

  (2ನೇ ಅಧ್ಯಾಯ ಶ್ಲೋಕ 256)

ಧರ್ಮದಲ್ಲಿ ಬಲವಂತ ಇರುವುದು ಬೇಡ. ಸರಿದಾರಿ ತಪ್ಪುದಾರಿಗಳ ನಡುವೆ ಭೇದ ತೋರಿಸಿದೆ, ಅತಿಕ್ರಮಿಸುವವನನ್ನು ನಂಬದೇ, ದೇವರನ್ನು ನಂಬುವವನು ಸರಿಯಾದ ದಾರಿ ಹಿಡಿದಿದ್ದಾನೆ. ಆದ್ದರಿಂದ ದಾರಿ ತಪ್ಪುವುದಿಲ್ಲ. ದೇವರು ಸದಾ ಕೇಳುತ್ತಿದ್ದಾನೆ, ನೋಡುತ್ತಿದ್ದಾನೆ. ಅವನಿಗೆ

ಎಲ್ಲವೂ ಗೊತ್ತು. ಹೀಗೆ ಶಾಶ್ವತವಾದ ಸಾರ್ವತ್ರಿಕ ಸತ್ಯಗಳನ್ನು ಖುರಾನ್ ವಿಧವಿಧದಲ್ಲಿ ಬಣ್ಣಿಸಿದೆ.

ಯಾವುದೇ ಕ್ಷೇತ್ರವಾಗಲೀ ಉತ್ತಮವಾದುದನ್ನು ಮತ್ತು ಉತ್ತುಂಗವಾದುದನ್ನು ಅನ್ವೇಷಿಸಿ ಪಡೆಯುವುದು ಬಹಳ ಅವಶ್ಯಕ. ಆಗ ಯಶಸ್ಸಿನ ಸಾಧನೆ, ಕಾರ್ಯಸಿದ್ಧಿ, ಮನೋ ನೆಮ್ಮದಿ, ಅದರಿಂದ ಶಾಂತಿ ಪ್ರಾಪ್ತವಾಗುವುದು. ಹೀಗೆ ಸತ್ಯದ ದರ್ಶನವಾಗುವುದು. ಅದರಿಂದ ಉನ್ನತ ಮೌಲ್ಯಗಳು, ಆನಂದವು ಪ್ರಾಪ್ತವಾಗುವುದು. ಈ ಎಲ್ಲಾ ಸಾಧನೆಗೂ ಕ್ರಿಯೆಯು ಬಹಳ ಅವಶ್ಯಕವು.

ಕ್ರಿಯಾನ್ವೇಷಣೆಯಲ್ಲಿ ಸಂತೋಷವು ದೊರಕುವುದು. ಹೀಗೆ ಕ್ರಿಯಾತ್ಮಕ ಪ್ರಪಂಚದಲ್ಲಿ ಸೋಮಾರಿತನ, ಆಲಸ್ಯ, ಅನಾದರ, ಕ್ಷಿಪ್ರವಾಗಿ ಐಹಿಕ ಭೋಗಲಾಲಸೆಗಳನ್ನು ಪಡೆಯುವಿಕೆ ಇತ್ಯಾದಿ ಮನೋವಿಕಾರವು ಮನೆ ಮಾಡಿ ಪ್ರಗತಿಯ ದಾರಿಯನ್ನು ಬದಲಿಸುತ್ತಿದೆ.

ಮಾನಸಿಕ ಮಹತ್ವಾಕಾಂಕ್ಷೆಯ ಮೂಲಕ ಸಾಧಿಸಬೇಕಾದ್ದನ್ನು ಸಾಧಿಸದೇ ವಿಮುಖರಾಗುತ್ತಿದ್ದೇವೆ. ಅತಿಲೋಲುಪತೆ ಸಮಾಜದ ಅವನತಿಗೆ ಕಾರಣೀಭೂತವಾಗಿದೆ.

ಮೃತ್ಯುವಿನಲ್ಲೂ ಬದುಕನ್ನು ಅರ್ಥೈಸುವ ಉಪನಿಷತ್ತಿನ ಆದರ್ಶಗುಣಗಳನ್ನು ಅದರ ವಿಶಿಷ್ಟ ಅರಿವನ್ನು ಇಂದು ಹುಡುಕಿದರೂ ಸಿಗುವುದು ಕಷ್ಟವಾಗಿದೆ. ಪ್ರಸ್ತುತ ಇದರ ವಿರುದ್ಧವಾದ ದೆಶೆಯು ಬಹಳಷ್ಟು ಗೋಚರಿಸುತ್ತಿದೆ. ಅದೆಂದರೆ ಬದುಕಿನಲ್ಲಿ ಸಾವನ್ನು ಕಾಣುತ್ತಿರುವುದು. ಕ್ಷಣ

ಕ್ಷಣಕ್ಕೂ ಗಂಡಾಂತರ, ಅಸಹನೆ, ತುಮುಲ, ತೊಳಲಾಟಗಳಿಂದ ಬರ್ಬರ ರೀತಿಯಲ್ಲಿ ಬದುಕು ಸಾಗುತ್ತಿದೆ. ಕವಿವಾಣಿಯೊಂದು ಹೀಗಿದೆ.

**ನಿದ್ರೆ ಬಲು ಸೊಗಸು,**

**ಮರಣ ಅದಕ್ಕಿಂತ ಲೇಸು,**

**ಹುಟ್ಟು ತಾನಿಲ್ಲದಿರೆ,**

**ಬೇರಿಲ್ಲ ಅದಕ್ಕಿಂತ ಮಿಗಿಲು ॥**

ಪಲಾಯನವಾದದ ಜೀವನ ಬೇಡ. ಋಷಿವಾಣಿಯಲ್ಲಿ ಅಚಲ ನಂಬಿಕೆ ಇಟ್ಟು ಉಪನಿಷತ್ತಿನ ವಿಚಾರಗಳನ್ನು ಅರ್ಥಪೂರ್ಣವಾಗಿ ರೂಢಿಸಿಕೊಂಡು, ಸುಖ ಸಮೃದ್ಧವಾದ ಜೀವನವನ್ನು ಹೊ0ದಿ, ನಮ್ಮ ದೇಶ, ಸಂಸ್ಕೃತಿಯನ್ನು ಸಮೃದ್ಧವಾಗಿ ಮಾಡಲು ನಾವು ಪಣತೊಡೋಣ. ನೊಂದವರಿಗೆ, ಭವಿಷ್ಯದ ದಿನದಲ್ಲಿ ನಂಬಿಕೆಯುಳ್ಳವರಿಗೆ, ಒಳಿತನ್ನು ಮಾಡುವವರಿಗೆ, ಎಲ್ಲರಿಗೂ ಭಗವಂತ ಫಲಕೊಡುತ್ತಾನೆ. ಅವರಿಗೆ ಭಯವಿಲ್ಲ, ಅವರಿಗೆ ದುಃಖವಿಲ್ಲ, ಅವರಿಗೆ ಮರಣವಿಲ್ಲ.

# ಉಪನಿಷತ್ತಿನ ಪ್ರಾರ್ಥನೆ

ಅಸತೋ ಮಾ ಸದ್ಗಮಯ
ತಮಸೋ ಮಾ ಜ್ಯೋತಿರ್ಗಮಯ
ಮೃತ್ಯೋರ್ಮಾ ಅಮೃತಂ ಗಮಯ
ಓಂ ಶಾಂತಿ ಶ್ಯಾಂತಿ ಶ್ಯಾಂತಿಃ

ಎಲೈ ಪರಮಾತ್ಮನೇ ಅಸತ್ಯವಾದ ವಿಷಯದಿಂದ ನನ್ನನ್ನು ಸತ್ಯ ಶಾಶ್ವತವಾದ ತಾಣಕ್ಕೆ ಹೋಗುವಂತೆ ಮಾಡು,

ಕತ್ತಲಿನಿಂದ ಬೆಳಕಿನೆಡೆಗೆ ಕಳುಹಿಸು

ನಶ್ವರವಾದ ಸ್ಥಿತಿಯಿಂದ ಅಮೃತಮಯವಾದ ಶಾಶ್ವತ ಸ್ಥಿತಿಗೆ ತಲುಪಿಸು.